ಅಧ್ಯಕ್ಷರು : ಇದನ್ನು ಆಮೇಲೆ ತೆಗೆದುಕೊಳ್ಳುತ್ತೇನೆ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಗೋಹತ್ಯೆ ನಿಷೇಧ ಮಾಡೇ ಮಾಡುತ್ತೇವೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇವರು ತಂದಿರುವಂತಹ ರೀತಿಯಲ್ಲಿ ಗೋ ಹತ್ಯೆ ನಿಷೇಧ ಸಾಧ್ಯನೇ ಇಲ್ಲ. ಇವರ hidden agenda implement ಮಾಡಲು ಸಾಧ್ಯನೇ ಇಲ್ಲ. We will not allow you to implement your hidden agenda.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಗೋಹತ್ಯೆ ಬಿಲ್ಲನ್ನು ಮಾಡೇ ಮಾಡುತ್ತೇವೆ. ಬಿಡುವುದಿಲ್ಲ.

(ಗೊಂದಲ)

ಅಧ್ಯಕ್ಷರು : ಆಯಿತು. ಈಗ ಬೇರೆ ಬಿಲ್‌ನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು : ಕರ್ನಾಟಕ ಸಹಕಾರ ಸಂಘಗಳ ವಿಧೇಯಕ 2012. 2–3 ಬಿಲ್‌ಗಳು ಇರುವ ಕಾರಣದಿಂದ ಆಮೇಲೆ ತೆಗೆದುಕೊಳ್ಳೋಣ. ಇದಾದ ಕೂಡಲೇ ಅವಕಾಶ ಕೊಡುತ್ತೇನೆ.

(ಗೊಂದಲ)

IV. ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು

1) ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ 2012.

ಶ್ರೀ ಸಿದ್ದರಾಮಯ್ಯ : ಇದು ಮುಗಿಯಲಿ, ಉತ್ತರ ಕೊಡಲಿ.

ಪರ್ಯಾಲೋಚನಾ ಪ್ರಸ್ತಾವ

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿ ಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ (ಉಭಯ ಸದನಗಳಿಂದ

ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದಿರುಗಿಸಲ್ಪಟ್ಟಂತೆ) 2012 ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪುನರ್ ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : Explain ಮಾಡಿ.

ಶ್ರೀ ಟಿ.ಬಿ. ಜಯಚಂದ್ರ : ಯಾವ ಕಾರಣಕ್ಕಾಗಿ ವಾಪಸ್ಸು ಬಂತು ಎನ್ನುವುದನ್ನು ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ (ಉಪ ಮುಖ್ಯಮಂತ್ರಿಗಳು, ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನ ಮಂಡಲದಲ್ಲಿ ಸರ್ವಾನುಮತದಿಂದ ವಿಧಾನಸಭೆ ಮತ್ತು ವಿಧಾನ ಪರಿಷತ್ತು ಎರಡು ಕಡೆಗಳಲ್ಲಿ ಸರ್ವಾನುಮತದಿಂದ ಅಂಗೀಕಾರವಾಗಿ ಗೌರವಾನ್ವಿತ ರಾಜ್ಯಪಾಲರಿಗೆ ಹೋಗಿದ್ದಂತಹ ಬಿಲ್ ಎನ್ನುವುದು ನಿಮಗೆಲ್ಲಾ ಗೊತ್ತಿದೆ. ಮಾನ್ಯ ರೇವಣ್ಣನವರೇ, ನೀವು ನೋಡುತ್ತಾ ಕುಳಿತುಕೊಂಡರೆ ಗೋಹತ್ಯೆ ಯನ್ನು ನೀವೆಲ್ಲಾ ನಿಷೇಧ ಮಾಡುವುದಕ್ಕೆ ಸಾಧ್ಯವಿಲ್ಲವೆಂದೂ ನಾವು ಮಾಡುತ್ತೇವೆ.

(ಗೊಂದಲ)

ಶ್ರೀ ರೋಷನ್ ಬೇಗ್ : ಕೆಲಸದ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಈ ಬಿಲ್ ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಉಪನಾಯಕರಿಗೆ, ಜೆ.ಡಿ.ಎಸ್. ನಾಯಕರಿಗೆ, ಎಲ್ಲರಿಗೂ ಗೊತ್ತಿರುವ ಬಿಲ್. ಕರ್ನಾಟಕ ರಾಜ್ಯದ ಸರ್ಕಾರಿ ಭೂಮಿಯಲ್ಲಿ ಗುಡಿಸಲು ಗಳನ್ನು ಕಟ್ಟಿಕೊಂಡಿರುವಂತಹ ಬಡವರಿಗೆ ಆಶ್ರಯ ಯೋಜನೆಯ ಷರತ್ತು ಗಳನ್ನೊಳಪಟ್ಟು, ಯಾವ ಬಡವರು ಗುಡಿಸಲುಗಳನ್ನು ಕಟ್ಟಿಕೊಂಡಿದ್ದಾರೋ, ಆ ಬಡವರಿಗೆ ಹಕ್ಕುಪತ್ರವನ್ನು ಕೊಡಬೇಕೆನ್ನುವ ಉದ್ದೇಶದಿಂದ ಇಡೀ ಸದನ

ಸರ್ವಾನುಮತದಿಂದ ಕಳುಹಿಸಿದಂತಹ ಬಿಲ್. ರಾಜ್ಯಪಾಲರು ಏತಕ್ಕಾಗಿ ವಾಪಸ್ಸು ಕಳುಹಿಸಿದ್ದಾರೆ ಎಂಬ ಬಗ್ಗೆ ಸ್ಪಷ್ಟನೆ ಮಾಡಬೇಕು. ನಾನು ಮಾನ್ಯ ಅಧ್ಯಕ್ಷರ ಮೂಲಕ ಇಡೀ ಸದನಕ್ಕೆ ಪ್ರಾರ್ಥನೆ ಮಾಡುವುದೇನೆಂದರೆ ಇಡೀ ರಾಜ್ಯದಲ್ಲಿ ವಸತಿ ಇಲಖೆಯಿಂದ ಅನೇಕ ವಿಧಾನಸಭಾ ಕ್ಷೇತ್ರದ ಸದಸ್ಯರಿಗೆ 2,000, 3,000, 4,000 ಮನೆಗಳನ್ನು sanction ಮಾಡಿ ಕೊಡಲಾಗಿದೆ. ಆ ಮನೆಗಳನ್ನು ನಿರ್ಮಾಣ ಮಾಡುವುದಕ್ಕೆ ಹಕ್ಕುಪತ್ರ ಇಲ್ಲದಿರುವ ಸಮಸ್ಯೆ ಯಾಗಿದೆ. ಹಾಗಾಗಿ ಬಡವರಿಗೆ ಅವರು ವಾಸ ಮಾಡುತ್ತಿರುವ ಗುಡಿಸಲಿನ ಜಾಗವನ್ನು ಅಂದರೆ 2400 (60x40) ಚ. ಅಡಿ ಒಳಗೆ ಅವರಿಗೆ ಕೊಡಬೇಕೆಂದು ತೀರ್ಮಾನ ಮಾಡಿ ಏನು ತಂದಿದ್ದೇವೆ ಅದಕ್ಕೆ ನಾನು ಇಲ್ಲಿ ಮೊತ್ತೊಮ್ಮೆ ಸೂಚಿಸುತ್ತಿದ್ದೇನೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಏಕೆ ವಾಪಸ್ಸು ಬಂತು ಎನ್ನುವುದನ್ನು explain ಮಾಡಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಸಚಿವರು ತಂದಿರುವಂತಹ ರೀತಿಯಲ್ಲಿ 94(ಸಿ) ಗೆ amendment ಅನ್ನು ಸರ್ವಾನುಮತದಿಂದ ನಾವೆಲ್ಲರೂ ಸೇರಿ ಪಾಸ್ ಮಾಡಿ ಕೊಟ್ಟಿದ್ದೇವೆ. ಆದರೆ, ಗೌರವಾನ್ವಿತ ರಾಜ್ಯಪಾಲರು ಇದನ್ನು ಕೆಲವು ಒಕ್ಕಣೆಯೊಂದಿಗೆ ವಾಪಸ್ಸು ಕಳುಹಿಸಿ ಕೊಟ್ಟಿದ್ದಾರೆ. ಅದರಲ್ಲಿ ಅವರ observation ಏನು ಎಂದರೆ; ಸಾರ್ವಜನಿಕ ಭೂಮಿಯನ್ನು ಬೃಹತ್ ಪ್ರಮಾಣದಲ್ಲಿ ಅನಧಿಕೃತ ಸ್ವಾಧೀನತೆ ಹೊಂದಿರುವ ಹಿನ್ನೆಲೆಯಲ್ಲಿ, ಶ್ರೀ ವಿ. ಬಾಲಸುಬ್ರಮಣಿಯನ್, ಐಎಎಸ್. (ನಿವೃತ್ತ) ಇವರ ಅಧ್ಯಕ್ಷತೆಯಲ್ಲಿ ಸರ್ಕಾರವು ರಚಿಸಿದ್ದ ಸಾರ್ವಜನಿಕ ಭೂ ರಕ್ಷಣಾ ಕಾರ್ಯ ಪಡೆಯು ಅರಣ್ಯ ಭೂಮಿ ಮತ್ತು ಸಾಮಾನ್ಯ ಭೂಮಿಯೂ ಸೇರಿದಂತೆ ಸರ್ಕಾರಿ ಭೂಮಿಯನ್ನು ಬೃಹತ್ ಪ್ರಮಾಣದಲ್ಲಿ ಅನಧಿಕೃತವಾಗಿ ಸ್ವಾಧೀನತೆ ಹೊಂದಿರುವ ಬಗ್ಗೆ ಪರಿಶೀಲನೆ ನಡೆಸಿತು ಮತ್ತು ಅದು 2011 ರಲ್ಲಿ ತನ್ನ ವರದಿಯನ್ನು ನೀಡಿ ಅದರಲ್ಲಿ 11 ಲಕ್ಷ ಎಕರೆಗಳಿಗಿಂತಲೂ ಹೆಚ್ಚಿನ

ಪ್ರಮಾಣದ ಸರ್ಕಾರಿ ಭೂಮಿಯು ಅಕ್ರಮ ಸ್ವಾಧೀನತೆಯಲ್ಲಿದೆ ಎಂದು ಎತ್ತಿ ತೋರಿಸಿದೆ. ಭೂ ಕಬಳಿಕೆ ಮತ್ತು ಅತಿಕ್ರಮಣದ ಸಮಸ್ಯೆಯ ವಿವರಗಳನ್ನು ಪರಿಶೀಲಿಸಲು ರಚಿಸಲಾಗಿದ್ದ ಜಂಟಿ ವಿಧಾನಮಂಡಲ ಸಮಿತಿಯು ಈ ಮುಂದಿನಂತೆ ಅಭಿಪ್ರಾಯ ವ್ಯಕ್ತಪಡಿಸಿದೆ.

"ದುಷ್ಟ ಭೂ ಕಬಳಿಕೆದಾರರು, ರಿಯಲ್ ಎಸ್ಟೇಟ್ ಏಜೆಂಟರು ಹಾಗೂ ಅವರ ನಿರ್ಭೀತ ದುಷ್ಪ್ರೇರಕರು ನುಣುಚಿಕೊಳ್ಳಲು ಅವಕಾಶ ನೀಡಿದ ಸರ್ಕಾರದ ನಿಷ್ಕ್ರಿಯತೆಯ ಕಾರಣದಿಂದಾಗಿ ಸಾಮಾನ್ಯ ನಾಗರೀಕರ ಸರ್ಕಾರದ ಮತ್ತು ಆಡಳಿತದ ಬಗ್ಗೆ ನಂಬಿಕೆಯನ್ನು ಕಳೆದುಕೊಂಡರು. ಆದ್ದರಿಂದ ಮೇಲೆ ನಿರೂಪಿಸಿರುವ ಭೂ ಕಬಳಿಕೆದಾರರ ಮತ್ತು ಅವರ ದುಷ್ಪ್ರೇರಕರ ವಿರುದ್ಧ ಸರ್ಕಾರವು ಕಠಿಣ ಕ್ರಮ ಕೈಗೊಳ್ಳುವುದು ಅತ್ಯಂತ ಅವಶ್ಯಕವಾಗಿದೆ ಎಂಬುದು ಈ ಸಮಿತಿಯ ಪರಿಗಣಿತ ಅಭಿಪ್ರಾಯವಾಗಿದೆ."

ಇವರೇ ರಚಿಸಿರುವಂತಹ ಸದನ ಸಮಿತಿಯು ಕೊಟ್ಟಿರುವಂತಹ ಅಭಿಪ್ರಾಯದ ಪ್ರಕಾರದ ಮೇಲೆ ಸರ್ಕಾರಿ ಭೂಮಿಯ ಅತಿಕ್ರಮಣವನ್ನು ಸಕ್ರಮಗೊಳಿಸುವ ನೀತಿಯು ಕಾನೂನು ವಿರುದ್ಧವಾಗಿ ಸರ್ಕಾರಿ ಭೂಮಿಯ ಸ್ವಾಧೀನತೆ ಹೊಂದಲು ನೇರವಾಗಿ ಪ್ರೋತ್ಸಾಹಿಸುತ್ತದೆ. ಈ ತಿದ್ದುಪಡಿಯು ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವಂಥ ನ್ಯಾಯ ನಿಯಮ, ಕಾನೂನಿನ ಮುಂದೆ ಸಮಾನತೆ, ಯುಕ್ತ ಕ್ರಮ, ಕಾನೂನಿನ ಗಾಂಭಿರ್ಯತೆ, ನ್ಯಾಯಾಲಯಗಳ ಘನತೆ, ಪರಭಾರೆ ಮಾಡಲಾಗದ ಮೂಲಭೂತ ಹಕ್ಕುಗಳು, ನಿರ್ದೇಶಕರ ತತ್ವಗಳು, ಮುಂತಾದಂಥ ಶ್ರೇಷ್ಠ ತತ್ವಗಳ ಮೇಲೆ ತೀವ್ರ ದುರಾಕ್ರಮಣ ಮಾಡಲು ಎಡೆ ಮಾಡಿಕೊಡುತ್ತದೆ. ಅವಧಿಯನ್ನು ಜನವರಿ 2012ರವರೆಗೆ ವಿಸ್ತರಿಸುವ ಸದರಿ ವಿಧೇಯಕವು ಸರ್ಕಾರಿ ಭೂಮಿಯ ಮತ್ತಷ್ಟು ಹೆಚ್ಚಿನ ಅಕ್ರಮ ಸ್ವಾಧೀನತೆಗೆ ಅವಕಾಶ ಕಲಿಸುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರಿ ಭೂಮಿಯ ಅಕ್ರಮ ಸ್ವಾಧೀನತೆ ಯನ್ನು ಹತ್ತಿಕ್ಕಬೇಕಾಗಿದೆ. ಅಂದರೆ ಎಲ್ಲೋ ಒಂದು ಕಡೆ ಲೂಟಿ ಮಾಡುತ್ತಾರೆ ಎನ್ನುವಂಥ ಅಭಿಪ್ರಾಯದ ಹಿನ್ನೆಲೆಯಲ್ಲಿ ವಾಪಸ್ಸು ಕಳುಹಿಸು ವುದಕ್ಕೆ ಒಂದು ಕಾರಣವಾಗಿದೆ.

ಅದರ ಜೊತೆಗೆ ಘನ ಸರ್ವೋಚ್ಚ ನ್ಯಾಯಾಲಯವು ಜಸ್‌ಪಾಲ್‌ಸಿಂಗ್ ಮತ್ತು ಇತರರು ವಿರುದ್ಧ-ಪಂಜಾಬ್ ರಾಜ್ಯ ಪ್ರಕರಣದಲ್ಲಿ ದಿನಾಂಕ: 28.01.2011ರಲ್ಲಿ ನೀಡಿದ ತನ್ನ ತೀರ್ಪಿನಲ್ಲಿ ದೀರ್ಘಕಾಲದ ಅಕ್ರಮ ಸ್ವಾಧೀನತೆ ಅಥವಾ ಅದರ ಮೇಲೆ ಕಟ್ಟಡ ನಿರ್ಮಿಸಲು ಅಧಿಕ ಹಣ ವೆಚ್ಚ ಮಾಡಿರುವುದು ಅಥವಾ ರಾಜಕೀಯ ಸಂಪರ್ಕಗಳು-ಇವುಗಳನ್ನು ಈ ಅಕ್ರಮ ಕೃತ್ಯವನ್ನು ಮನ್ನಿಸಲು ಅಥವಾ ಅಕ್ರಮ ಸ್ವಾಧೀನತೆಯನ್ನು ಸಕ್ರಮಗೊಳಿಸಲು ಒಂದು ಸಮರ್ಥನೆ ಎಂದು ಪರಿಗಣಿಸಬಾರದೆಂದು ಸ್ಪಷ್ಟವಾಗಿ ಹೇಳಿದೆ. The spirit of the Supreme Court Judgement is that unauthorized cultivation is the main reason. ಈ ಕಾರಣಕ್ಕೋಸ್ಕರ ಈ looterಸಗೆ ಅವಕಾಶವಾಗಬಾರದೆಂಬ ಅಭಿಪ್ರಾಯ".

ಸದರಿ ತಿದ್ದುಪಡಿ ವಿಧೇಯಕವು ಸಾಮಾನ್ಯ ಭೂಮಿಯ ಮಂಜೂರಾತಿಯನ್ನು/ ಸಕ್ರಮಗೊಳಿಸುವುದನ್ನು ನಿರ್ದಿಷ್ಟವಾಗಿ ನಿಷೇಧಿಸುವುದಿಲ್ಲ. ಈ ತಿದ್ದುಪಡಿಯು ಸಾರ್ವಜನಿಕ ಹಿತವನ್ನು ಅಥವಾ ಸಾಮಾಜಿಕ ಕಾರಣವನ್ನು ಪೂರೈಸುವುದಿಲ್ಲ. ಇನ್ನೊಂದೆಡೆ ಇದು ಸರ್ಕಾರಿ ಭೂಮಿಯ ಅಕ್ರಮ ಕಬಳಿಕೆಗೆ ಎಡೆಮಾಡಿಕೊಡಬಹುದು ಎನ್ನುವಂಥ ಅನುಮಾನವನ್ನು ವ್ಯಕ್ತಪಡಿಸಿದ್ದಾರೆ.

ಮೇಲೆ ವಿವರಿಸಿದ ಹಿನ್ನೆಲೆಯಲ್ಲಿ ಮತ್ತು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಬೆಳಕಿನಲ್ಲಿ ವಿಧಾನಮಂಡಲದ ಉಭಯ ಸದನಗಳು ಸದರಿ ವಿಧೇಯಕವನ್ನು ಪುನರ್ ಪರಿಶೀಲಿಸುವ ಅಗತ್ಯವಿದೆ. ಆದ್ದರಿಂದ, ವಿಧೇಯಕವನ್ನು ಪುನರ್ ಪರಿಶೀಲನೆಗಾಗಿ ಕರ್ನಾಟಕ ವಿಧಾನಸಭೆಗೆ ಮತ್ತು ಕರ್ನಾಟಕ ವಿಧಾನ ಪರಿಷತ್ತಿಗೆ ಹಿಂದಿರುಗಿಸಲಾಗಿದೆ.

ಎಂದು ಮಾನ್ಯ ರಾಜ್ಯಪಾಲರು ವಾಪಸ್ಸು ಹಾಕಿದ್ದಾರೆ. ಅಂದರೆ ultimately decision ನಮ್ಮದೇ. ಈಗ ಮಾನ್ಯ ರಾಜ್ಯಪಾಲರು observe ಮಾಡಿರುವ ಪ್ರಕಾರ ಬಾಲ ಸುಬ್ರಹ್ಮಣಿಯನ್ ಸಮಿತಿ ವರದಿ ಏನಾಯಿತು? 11 ಲಕ್ಷ ಎಕರೆ ಇವತ್ತು ಅತಿಕ್ರಮಣವಾಗಿದೆ, ಒತ್ತುವರಿಯಾಗಿದೆ. ಎಷ್ಟರಮಟ್ಟಿಗೆ

ಪ್ರಾಮಾಣಿಕವಾಗಿ ಅದನ್ನು ಬಿಡಿಸುವ ಕೆಲಸವನ್ನು ಸರ್ಕಾರ ಮಾಡಿದೆ? ಇವತ್ತು ಆ ಸದನದ ಸಮಿತಿ ಕೊಟ್ಟಿರುವ ತೀರ್ಪು ಏನೆಂದರೆ ಇದೆ? ಅದು ಸರ್ಕಾರದ ವಿರುದ್ಧವಾಗಿಯೇ ಇದೆ. ಇವರು ಭೂಗಳ್ಳರ ಜೊತೆಯಲ್ಲಿಯೇ ಇದ್ದೀರಿ, ಅವರಿಗೆ ಪ್ರೋತ್ಸಾಹ ಮಾಡುತ್ತಿದ್ದೀರಿ ಎನ್ನುವಂಥ ಅಭಿಪ್ರಾಯ ಬಂದ ಮೇಲೆ ಮಾನ್ಯ ರಾಜ್ಯಪಾಲರು ಸರ್ವೇ ಸಾಮಾನ್ಯವಾಗಿ ಉಭಯ ಸದನಗಳ ಅಭಿಪ್ರಾಯಕ್ಕೆ, ಚರ್ಚೆಗೆ ಮತ್ತೊಂದು ಬಾರಿ ಕಳುಹಿಸಿರುವುದು ಸ್ವಾಭಾವಿಕ. ಹಾಗಾಗಿ ದಯಮಾಡಿ ಈಗ ಸರ್ಕಾರ ಬಾಲಸುಬ್ರಹ್ಮಣಿಯನ್ ಕಮಿಟಿಯಿಂದ ಆಗಿರುವಂಥ ಸಾಧಕಗಳೇನು? ಅಧ್ಯಕ್ಷರೇ ನಾನು ಇನ್ನೂ ಒಂದು ಮಾತನ್ನು ಹೇಳುತ್ತೇನೆ. ಬಹುಶಃ ಬಾಲಸುಬ್ರಹ್ಮಣಿಯನ್ ಕಮಿಟಿಯಲ್ಲಿ ಕೊಟ್ಟಿರುವಂಥ ವರದಿಯನ್ನು ಅಧಿಕೃತವಾಗಿ ಕಂದಾಯ ಮಂತ್ರಿಗಳು ಹೇಳಿದರು, ಅದು ಅಧಿಕೃತವಾದ ವರದಿಯಲ್ಲ. ಬಾಲಸುಬ್ರಹ್ಮಣಿಯನ್ ಕಮಿಟಿಯ ವರದಿ ಅಧಿಕೃತವಾಗಿ ನಮಗೆ ಸಲ್ಲಿಕೆಯಾಗಿಲ್ಲ ಎಂದು ಕಂದಾಯ ಸಚಿವರಾಗಿದ್ದ ಕರುಣಾಕರರೆಡ್ಡಿಯವರು ಹೇಳಿದರು. ಯಾವ ಕಾರಣಕ್ಕೋಸ್ಕರ ಹೇಳಿದರೋ ಗೊತ್ತಿಲ್ಲ. ಬಾಲಸುಬ್ರಹ್ಮಣಿ ಯನ್‌ರವರು ಅಧಿಕೃತವಾಗಿ ವರದಿಯನ್ನು ಕೊಟ್ಟು ಪತ್ರಿಕಾಗೋಷ್ಠಿಯಲ್ಲಿ ಹೇಳಿದಾಗ ವಿಧಾನಸಭೆಯಲ್ಲಿ ಕರುಣಾಕರರೆಡ್ಡಿಯವರು ಹೇಳಿದಂಥ ಮಾತು, ಅದು ಅಧಿಕೃತವಾಗಿ ನಮ್ಮ ಕೈ ಸೇರಿಲ್ಲ, ಅದು ಅಧಿಕೃತವಾದ ವರದಿ ಅಲ್ಲ ಎಂದು ಹೇಳಿರುವ ದಾಖಲೆ ಕೂಡ ಇದೆ. ತಾವು verify ಮಾಡಿ ನೋಡಬಹುದು. ಇಷ್ಟೆಲ್ಲಾ ಗೊಂದಲಗಳಿರಬೇಕಾದರೆ.....

ಅಧ್ಯಕ್ಷರು : ಇದೆಲ್ಲಾ ಹಿಂದೆ ಚರ್ಚೆಯಾಗಿದೆ.

ಶ್ರೀ ಟಿ.ಬಿ. ಜಯಚಂದ್ರ : ಅವರು ಹೇಳಿದರು, ಖಚಿತಪಡಿಸಲಿ, ಬಾಲಸುಬ್ರಹ್ಮಣಿಯನ್ ಕಮಿಟಿಯಲ್ಲಿ ಎಷ್ಟಾಯಿತು? ಶ್ರೀ ಎ.ಟಿ. ರಾಮಸ್ವಾಮಿ ಕಮಿಟಿಯಲ್ಲಿ ಎಷ್ಟಾಯಿತು? ಎಷ್ಟು ಜನ ಒತ್ತುವರಿ ಮಾಡಿದರು? ಭೂಗಳ್ಳರಿಗೆ ಎಷ್ಟು support ಆಯಿತು? ಅದನ್ನೆಲ್ಲಾ ವಿವರವಾಗಿ ಕೊಡಲಿ, ಅದು ಸಮಾಧಾನ ಆದ ಮೇಲೆ ಚರ್ಚೆಗೆ ತೆಗೆದುಕೊಳ್ಳೋಣ.

ಅಧ್ಯಕ್ಷರು : ಈ Actನಲ್ಲಿ ಯಾವ ಲ್ಯಾಂಡ್ ಗ್ರ್ಯಾಂಟ್ ಕೊಡಬಹುದು, ಕೊಡಬಾರದು ಎಂದು Specific and clear ಆಗಿದೆ. ಏಕೆ ಸುಮ್ಮನೆ?

ಶ್ರೀ ಸಿದ್ದರಾಮಯ್ಯ : ಮೊದಲು lay ಮಾಡಿ. ಈಶ್ವರಪ್ಪನವರೇ, ಆಮೇಲೆ ಒಟ್ಟಿಗೆ ಉತ್ತರ ಕೊಡಿ.

ಅಧ್ಯಕ್ಷರು : 30x40 ಕೊಡುವುದಕ್ಕೆ....

ಶ್ರೀ ಸಿದ್ದರಾಮಯ್ಯ : ಇಲ್ಲಿ ಚರ್ಚೆ ಮಾಡುವುದಕ್ಕೆ ಬಿಡದೆ ಹೋದರೆ ಇವರು ಯಾವ ರೀತಿಯ ಮಂತ್ರಿಗಳು?

ಶ್ರೀ ಅಪ್ಪಚ್ಚು ರಂಜನ್ : ನಾವು ಕೇಳುತ್ತಿರುವುದು ಬಡವರಿಗೆ, ಕೂಲಿ ಕಾರ್ಮಿಕರಿಗೆ.

(ಗೊಂದಲ)

ಅಧ್ಯಕ್ಷರು : ಮಲೆನಾಡು ಬೆಲ್ಟ್‌ನಲ್ಲಿ ಈ ಸಮಸ್ಯೆಯಿರುವುದು.

ಶ್ರೀ ಸಿದ್ದರಾಮಯ್ಯ : ಕುಳಿತುಕೊಳ್ಳುವುದಕ್ಕೆ ಹೇಳಿ ಸ್ವಲ್ಪ, ಚರ್ಚೆ ಮಾಡಬೇಕೋ, ಬೇಡವೋ ಹೇಳಿ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರು, double standard ತೆಗದುಕೊಂಡು ಚರ್ಚೆ ಮಾಡುವುದು ಬೇಡ, ಎಷ್ಟು double standard ನೋಡಿ ನಿಮ್ಮ ಧೋರಣೆಗಳು?

ಶ್ರೀ ಸಿದ್ದರಾಮಯ್ಯ : ಇರಲಿ, ತಾವು ಕುಳಿತುಕೊಳ್ಳಿ, ನಾವು double standard ನೀವು triple standard ಮಾನ್ಯ ಅಧ್ಯಕ್ಷರೆ, ನಾನು ಮತ್ತೆ ಸ್ಪಷ್ಟಪಡಿಸುತ್ತಿದ್ದೇನೆ, ಇದಕ್ಕೆ ಒಪ್ಪಿಗೆ ಕೊಟ್ಟಿರುವುದು ನಿಜ, ಅದರಲ್ಲಿ ಎರಡನೇ ಮಾತಿಲ್ಲ. ಆದರೆ ಮಾನ್ಯ ರಾಜ್ಯಪಾಲರು ಇದರ ಬಗ್ಗೆ ಪರಿಗಣಿಸಬೇಕಾದರೆ ಅವರ view ಅನ್ನು ಹೇಳಿದ್ದಾರೆ. ಏನು ಹೇಳಿದ್ದಾರೆ; ಈಗ ತಂದಿರುವ ತಿದ್ದುಪಡಿ, ಇದು ಹಿಂದೆಯೂ ಒಂದು ಬಾರಿ ತಿದ್ದುಪಡಿಯಾಗಿತ್ತು. ದಿನಾಂಕ: 14-04-1998 ಅದಕ್ಕಿಂತ ಹಿಂದೆ ಯಾರ್‍ಯಾರು ಸರ್ಕಾರಿ ಜಮೀನಿನಲ್ಲಿ ಮನೆ ಕಟ್ಟಿಕೊಂಡಿದ್ದಾರೆ, ಅವರುಗಳಿಗೆಲ್ಲ ಹಕ್ಕುಪತ್ರ ಕೊಟ್ಟು ಸಕ್ರಮ ಮಾಡಿ

ಕೊಟ್ಟಿದ್ದಾರೆ. ಅವರು ಏನು ಪ್ರಶ್ನೆ ರೈಸ್ ಮಾಡಿದ್ದಾರೆಂದರೆ, ಅಲ್ಲಿಂದ ಸರ್ಕಾರ ಏಕೆ ಸುಮ್ಮನೆ ಇತ್ತು? ಈಗ ಇದ್ದಕ್ಕಿಂದ್ದಂತೆ ಏಕೆ ತೆಗೆದುಕೊಂಡು ಬಂದಿದ್ದಾರೆ? ಎನ್ನುವುದು ಒಂದು ಪ್ರಶ್ನೆ. ಎರಡನೆಯದಾಗಿ ಈಗ 2 ಕಮಿಟಿ ವರದಿಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ಬಾಲ ಸುಬ್ರಹ್ಮಣಿಯನ್ ಕಮಿಟಿ ವರದಿ, ಮತ್ತೊಂದು ಶ್ರೀ ಎ.ಟಿ. ರಾಮಸ್ವಾಮಿ ಕಮಿಟಿ ವರದಿ, ಎರಡೂ ವರದಿಗಳಲ್ಲಿ ಏನು ಹೇಳಿದ್ದಾರೆ? 2 ವರದಿಗಳನ್ನು ಸದನದ ಮುಂದೆ ಇವತ್ತಿನವರೆಗೆ ಮಂಡಿಸಲಿಲ್ಲ. ಶ್ರೀ ಎ.ಟಿ. ರಾಮಸ್ವಾಮಿ ಕಮಿಟಿ ವರದಿ ಇವರ ಸರ್ಕಾರ ಬಂದ ಮೇಲೆ ಬಂತು, ವರದಿ ಕೊಟ್ಟರೂ ಇವತ್ತಿನ ವರೆಗೆ ಮಂಡಿಸಿಲ್ಲ. ಹಿಂದೆ ಇದ್ದಂಥ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರು ಸದನದ ಮುಂದೆ ಮಂಡಿಸುತ್ತೇವೆ ಎಂದರು, ಮಂಡಿಸಲಿಲ್ಲ. ಆಮೇಲೆ ಬಾಲಸುಬ್ರಹ್ಮಣಿಯನ್ ಕಮಿಟಿ ಸರ್ಕಾರಿ ಜಮೀನು ಗಳನ್ನು ಮತ್ತು ಫಾರೆಸ್ಟ್ ಜಮೀನುಗಳನ್ನು ಯಾರ್‍ಯಾರು ಅತಿಕ್ರಮಣ ಮಾಡಿಕೊಂಡಿದ್ದಾರೆ? ಎನ್ನುವುದರ ಬಗ್ಗೆ ಅವರು ಒಂದು ವರದಿಯನ್ನು ಕೊಟ್ಟಿದ್ದಾರೆ, ಅದನ್ನು ಮಂಡಿಸಲಿಲ್ಲ. ಇದೆಲ್ಲವನ್ನು ಮಂಡಿಸದೇ ಗೌಪ್ಯವಾಗಿಟ್ಟುಕೊಂಡು ಇಲ್ಲಿ ಸದನದ ಮುಂದೆ ತರದೆ, ಇಡೀ ರಾಜ್ಯದ ಜನರಿಗೆ ಗೊತ್ತಾಗದ ರೀತಿಯಲ್ಲಿ, ಮಾಡಿ, ಇಲ್ಲಿ ಈ ಬಿಲ್ ಅನ್ನು ತಂದಿದ್ದಾರಲ್ಲಾ; ಅದಕ್ಕೆ ಮಾನ್ಯ ರಾಜ್ಯಪಾಲರು ತಕರಾರು ಎತ್ತಿದ್ದಾರೆ. ಆ ತಕರಾರಿಗೆ ನೀವು convince ಮಾಡಿ. ನೀವು Convince ಮಾಡಬೇಕಲ್ಲ? ಒಂದು judgement ಅನ್ನು ಕೂಡಾ ಅವರು ಉಲ್ಲೇಖ ಮಾಡಿದ್ದಾರೆ.

ಅಧ್ಯಕ್ಷರು : ಅದೆಲ್ಲಾ Urban Areasಗೆ ಸಂಬಂಧಪಟ್ಟಿರುವಂಥದ್ದು.

ಶ್ರೀ ಸಿದ್ದರಾಮಯ್ಯ : ತಾವು ನೋಡಿದ್ದೀರಾ?

ಅಧ್ಯಕ್ಷರು : ನಾನು ನೋಡಿದ್ದೇನೆ, ಅದೆಲ್ಲಾ Urban Areas ದಲ್ಲಿ ಬರುವಂಥದ್ದು, ಇದು Rural Area ಗೆ ಸಂಬಂಧಿಸಿದ್ದು,

ಶ್ರೀ ಸಿದ್ದರಾಮಯ್ಯ : ರಾಜ್ಯಪಾಲರು ಲಾಯರ್ ಆಗಿದ್ದವರು, Law Minister ಆಗಿದ್ದವರು.

ಅಧ್ಯಕ್ಷರು : Very clear restriction ಹಾಕಿದ್ದಾರೆ. ಯಾವುದನ್ನು ಕೊಡಬಾರದು, ಯಾವುದನ್ನು ಕೊಡಬಹುದೆಂದು.

ಶ್ರೀ ಸಿದ್ದರಾಮಯ್ಯ : ಘನ ಸರ್ವೋಚ್ಚ ನ್ಯಾಯಾಲಯವು ಜಸ್‌ಪಾಲ್‌ಸಿಂಗ್ ಮತ್ತು ಇತರರು ವಿರುದ್ಧ–ಪಂಜಾಬ್ ರಾಜ್ಯ ಪ್ರಕರಣದಲ್ಲಿ ದಿನಾಂಕ: 28.01.2011ರಲ್ಲಿ ತೀರ್ಪು ಕೊಟ್ಟಿದ್ದಾರೆ.

ಅಧ್ಯಕ್ಷರು : That pertains to only Urban Land. ಇದು ruralದು.

ಶ್ರೀ ಸಿದ್ದರಾಮಯ್ಯ : ಅದಕ್ಕಾಗಿಯೇ ಇದನ್ನು ಮಾಡುವಾಗ ಬಹಳ ಎಚ್ಚರಿಕೆ ವಹಿಸಬೇಕೆಂದು ನಾನು ಹೇಳುತ್ತಿದ್ದೇನೆ. ಇದನ್ನು ಮಾಡುವಾಗ ಈಗಾಗಲೇ ಭೂ ಕಬಳಿಕೆದಾರರು ಜಾಸ್ತಿಯಾಗಿದ್ದಾರೆ. ಇವರು ಯಾರು, ಏನು ಎಂದು identify ಮಾಡಬೇಕಲ್ಲ? ಎಲ್ಲರಿಗೂ ಸುಮ್ಮನೆ ಕೊಟ್ಟು ಬಿಡುವುದೇ? ಮನೆ ಕಟ್ಟಿಕೊಂಡವರಿಗೆಲ್ಲಾ ಕೊಟ್ಟುಬಿಡುವುದೇ?

ಅಧ್ಯಕ್ಷರು : There are restrictions.

ಶ್ರೀ ಸಿದ್ದರಾಮಯ್ಯ : ಅದಕ್ಕಾಗಿಯೇ 60x40 ಅಂದರೆ ಜಾಸ್ತಿಯಾಗುತ್ತದೆ. 30x40 ಎಂದು restrict ಮಾಡಿ.

ಅಧ್ಯಕ್ಷರು : ಅವರೂ ಬದುಕಲಿ. 60x40 ಎಂದರೆ ಎಷ್ಟಾಗುತ್ತದೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ : ಅದಕ್ಕಾಗಿಯೇ ಹೇಳುತ್ತಿದ್ದೇನೆ 30x40 ಎಂದು ಮಾಡಿ. 60x40 ಎಂದು ಏಕೆ? ಬಡವರೇ 60x40 ರಲ್ಲಿ ಮನೆ ಕಟ್ಟಿಕೊಳ್ಳುವುದು?

ಅಧ್ಯಕ್ಷರು : ಒಂದಷ್ಟು ಗಾರ್ಡನ್ ಮಾಡಿಕೊಳ್ಳಲಿ.

(ಗೊಂದಲ)

ಶ್ರೀ ಸಿದ್ದರಾಮಯ್ಯ : ಇದು land encroachment people ಇದ್ದಾರಲ್ಲಾ, they are all powerful people. ಇದನ್ನೆಲ್ಲಾ ಮಾಡುವಂಥ ಬಡವರು ಬಹಳ ಕಡಿಮೆ. ಬಡವರಿಗೆ ಭಯ ಇರುತ್ತದೆ. ಪೊಲೀಸ್‌ನವರನ್ನು,

ರೆವಿನ್ಯೂರವರನ್ನು ಕಂಡರೆ ಭಯ, ಯಾರಿಗೆ ದುಡ್ಡಿದೆ, ಯಾರಿಗೆ political back up ಇದೆ, ಅವರು ಮಾತ್ರ ಇದನ್ನೆಲ್ಲ ಮಾಡುವುದು.

ಅಧ್ಯಕ್ಷರು : ಅವರನ್ನು ಯಾರೂ ಮುಟ್ಟುವುದಿಲ್ಲವಲ್ಲ. ಅವರನ್ನು ಖಾಲಿ ಮಾಡಿಸುವ ತಾಕತ್ತು ಯಾರಿಗೂ ಇಲ್ಲ.

ಶ್ರೀ ಸಿದ್ದರಾಮಯ್ಯ : ಆ ಕಾರಣದಿಂದ ನಾನು ಏನು ಹೇಳುತ್ತೇನೆಂದರೆ, ಯಾರು deserving ಇದ್ದಾರೆ, ಯಾರು ಬಡವರಿದ್ದಾರೆ, ಯಾರು ಗುಡಿಸಲು ಹಾಕಿಕೊಂಡಿದ್ದಾರೆ, ಅಂಥವರಿಗೆ ಅನುಕೂಲ ಮಾಡಿದರೆ ಅದನ್ನು ಸ್ವಾಗತ ಮಾಡಬಹುದು. ಯಾರ್‍ಯಾರೋ ಭೂಗಳ್ಳರಿಗೆ ಅನುಕೂಲ ಮಾಡಿದರೆ ಅದು ಪ್ರಯೋಜನವಾಗುವುದಿಲ್ಲವೆನ್ನುವುದು ನನ್ನ ಸಲಹೆ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲವನ್ನೂ ಹೇಳಿದ್ದಾರೆ. ಮಾನ್ಯ ಜಯಚಂದ್ರಯವರೂ ಸಹಾ ಬಹಳ ಚೆನ್ನಾಗಿ ಹಿಂದೆ Governor ರವರು ಯಾವ ರೀತಿಯಾಗಿ observation ಮಾಡಿದ್ದಾರೆ ಎಂಬುದನ್ನೆಲ್ಲಾ ಹೇಳಿದ್ದಾರೆ. ಅವರು ಹೇಳಿದ್ದರಿಂದ ಮತ್ತೆ ಅದನ್ನೆಲ್ಲಾ ನಾನು ಹೇಳುವಂತಹ ಅಗತ್ಯವಿಲ್ಲ. ಇವತ್ತು ಹಳ್ಳಿಯಲ್ಲಿ ಒಂದೇ ಒಂದು ಆಶ್ರಯದಲ್ಲಿ ಮನೆ ಕೊಟ್ಟಿಲ್ಲ. ಆಶ್ರಯದಲ್ಲಿ ಬಜೆಟ್ ಎಷ್ಟಿದೆ? ಅದು 1 ಲಕ್ಷ ರೂ.ಗಳು ಎಂದು ಇದೆ. ಬಸವ ವಸತಿ ಯೋಜನೆಯಲ್ಲಿ ಬಜೆಟ್ ಎಷ್ಟಿದೆ? ಅದು 75 ಸಾವಿರ ಅಥವಾ 1 ಲಕ್ಷ ರೂ.ಗಳು ಎಂದು ಇದೆ. 30x20 or 20x30 ರಲ್ಲಿ ಯಾರು ಕಡು ಬಡವರಿರುತ್ತಾರೋ, ಅವರಿಗೆ ಕೊಡಲಿಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಅವರಿಗೆ ಆಶ್ರಯ ಮನೆಗಳ cost 1 ಲಕ್ಷ ರೂ.ಗಳು ಇರುವುದನ್ನು 2 ಲಕ್ಷ ರೂ.ಗಳೆಂದು ಮಾಡಿ ನಾವು ಅದಕ್ಕೆ support ಮಾಡುತ್ತೇವೆ. ಯಾವ ರೀತಿಯಾಗಿ ಮಾನ್ಯ ರಾಜ್ಯಪಾಲರು ತಮ್ಮ observation ಅನ್ನು ಮಾಡಿದ್ದಾರೆ ಎನ್ನುವುದನ್ನು ನೋಡಬೇಕು. ಭೂ ಕಬಳಿಕೆ ಎನ್ನುವುದು ಒಂದು ರೀತಿಯಲ್ಲಿ ದಂಧೆಯಾಗುತ್ತಿದೆ. ಭೂ ಕಬಳಿಕೆಯಾಗದಂತೆ protection ಕೊಡುವುದು

ನಮ್ಮೆಲ್ಲರ ಕರ್ತವ್ಯವಾಗಿದೆ. ಇವತ್ತು ನಾವು ಹಳ್ಳಿ ಕಡೆಗೆ 10x10 ಜಾಗದಲ್ಲಿ 1 ಲಕ್ಷ ರೂ.ಗಳಿಗೆ ಮಾಡಿಸುತ್ತಿದ್ದೇವೆ. ಅದಕ್ಕಿಂತ ಜಾಸ್ತಿ ಬಸವ ವಸತಿ ಯೋಜನೆಯಲ್ಲಿ ಬರುತ್ತಿಲ್ಲ. ಹೀಗಿದ್ದಾಗ ಅವನಿಗೆ 60x40 site ಏತಕ್ಕಾಗಿ ಬೇಕು? ಕೇವಲ SC/ST ಗಷ್ಟೇ ಕೊಡುತ್ತೇವೆಂದು resolution pass ಮಾಡಿ. ಅದಕ್ಕೆ no problem. ಆದರೆ ಇಲ್ಲಿ ಅಕ್ಕ ಪಕ್ಕ already ಎಲ್ಲರೂ ಎಲ್ಲೆಲ್ಲಿ ಎಷ್ಟೆಷ್ಟು ಮಾಡುತ್ತೇವೆಂದು ಗುತ್ತಿಗೆ ತೆಗೆದುಕೊಂಡಿದ್ದಾರೆ. ಸರ್ಕಾರದಿಂದ ಹೊರಗಡೆಯಿಂದ ಬಂದ ತಕ್ಷಣ ಎಷ್ಟು ಗಿರಾಕಿಗಳನ್ನು ಮಾಡಿಕೊಳ್ಳುತ್ತಾರೆ ಎನ್ನುವುದೆಲ್ಲಾ ಆಗಿಬಿಟ್ಟಿದೆ. ಆದ್ದರಿಂದ ದಯವಿಟ್ಟು ಇದನ್ನು ಪರಿಶೀಲನೆ ಮಾಡಬೇಕು.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಮಾನ್ಯ ಅಧ್ಯಕ್ಷರೆ, ಬಡವರಿಗೆ ಕೊಡಲಿಕ್ಕೆ ನಮ್ಮದು ಯಾವ ರೀತಿಯಿಂದಲೂ ಅಭ್ಯಂತರವಿಲ್ಲ. ಅವರಿಗೆ ಬೇಕಾದರೆ 50x80 ಕೊಡಿ. ಯಾರು BPL card holders ಇದ್ದಾರೋ ಅವರಿಗೆ 50x80 ಕೊಡಿ. ನಾವು ಅದನ್ನು support ಮಾಡುತ್ತೇವೆ. ಆದರೆ ಇವರು ಯಾರು ಅಲ್ಲಿ ಬಲಾಢ್ಯ ಜನ ಕಟ್ಟಿಕೊಂಡು ಕುಳಿತಿದ್ದಾರೋ, ಅಂತಹವರಿಗೆ ಕೊಟ್ಟರೆ ಸರಿಯಾಗುವುದಿಲ್ಲ.

(ಗೊಂದಲ)

ಶ್ರೀ ಬಂಡೆಪ್ಪ ಖಾಶೆಂಪೂರ್ : ಸ್ವಾಮಿ, ತಾವು ಆಶ್ರಯ ಮನೆಗೆ ಎಷ್ಟು ಬಜೆಟ್ ಅನ್ನು ಕೊಟ್ಟಿದೀರಿ? ಮಾನ್ಯ ಅಧ್ಯಕ್ಷರೆ, ದಯವಿಟ್ಟು ಮಾನ್ಯ ಉಪ ಮುಖ್ಯಮಂತ್ರಿಗಳು ಇದನ್ನು ಮರು ಪರಿಶೀಲನೆ ಮಾಡಬೇಕೆಂದು ನಾನು ಕೋರುತ್ತೇನೆ.

(ಗೊಂದಲ)

ಅಧ್ಯಕ್ಷರು : ನಾನು ಮಾನ್ಯ ಕಿಮ್ಮನೆ ರತ್ನಾಕರ್ ಅವರನ್ನು ಕರೆದಿದ್ದೇನೆ. ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಪ್ರಮುಖವಾಗಿ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು 60x40 ಅಳತೆಯನ್ನು ಕಡಿಮೆ ಮಾಡಿ ಎಂದು ಹೇಳಿದರು. ನಮ್ಮ ಗ್ರಾಮೀಣ ಪ್ರದೇಶದಲ್ಲಿ actually 60x40 ಅಳತೆ ಒಂದು ದೊಡ್ಡ ಸಮಸ್ಯೆಯೇ ಅಲ್ಲ. ನಮ್ಮಲ್ಲಿ ಒಂದು ಮನೆ ಇದೆ ಎಂದರೆ, ಪಕ್ಕದಲ್ಲಿ ಒಂದು ಹಿತಲ್ಲು ಹಾಕಿಕೊಂಡಿದ್ದಾರೆ. ಬಸಲೆಸೊಪ್ಪಿನ ಚಪ್ಪರ ಹಾಕಿಕೊಂಡಿರುತ್ತಾರೆ, ತೆಂಗಿನ ಗಿಡ ಹಾಕಿಕೊಂಡಿರುತ್ತಾರೆ. ಟೌನ್‌ನಲ್ಲಿ it may be a cause. ನಾವು ಕೊಡತಕ್ಕಂಥದ್ದು ಬಡತನದಲ್ಲಿ ಇರುವವರಿಗೆ. ಆದ್ದರಿಂದ 40x60 ಒಂದು ದೊಡ್ಡ ಸಮಸ್ಯೆ ಅಲ್ಲ ಎನ್ನುವುದು ನನ್ನ ವಾದವಾಗಿದೆ. ಇದರಲ್ಲಿ ಬಹಳ ದೊಡ್ಡ ಸಮಸ್ಯೆ ಏನೆಂದರೆ, ಈ ತಿದ್ದುಪಡಿ ವಿಧೇಯಕದಲ್ಲಿ ಪೇಜ್ ನಂ.4ರಲ್ಲಿ (ಡಿ)ಯಲ್ಲಿ 'ಅರಣ್ಯ ಭೂಮಿಯಾಗಿದ್ದಲ್ಲಿ, ಆ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ' ಎಂಬ ಒಂದು ಅಂಶ ಇದೆ. ನಮ್ಮಲ್ಲಿ ಅರಣ್ಯ ಭೂಮಿ ಯಾವುದು? ಕಂದಾಯ ಭೂಮಿ ಯಾವುದು? ಎಂದು ಕಳೆದ ನೂರು ವರ್ಷಗಳಿಂದ ಅಳತೆಯನ್ನೇ ಮಾಡಿಲ್ಲ. ಇಲ್ಲಿಯವರೆಗೆ, ದೇವರ ದಯೆ ಯಿಂದ ಒಂದು ಟಿಪ್ಪಣಿ ಕಾಪಿ ಮಾಡಿಲ್ಲ. ಅರಣ್ಯ ಇಲಾಖೆಯವರು ಎಲ್ಲರ ಮನೆ ಮೇಲೆ, ಟೌನ್ ಮೇಲೆ, ಆಸ್ಪತ್ರೆ ಮೇಲೆ, ಎಲ್ಲದರ ಮೇಲೂ ಇದು 'ನಮಗೆ ಸೇರಿದ್ದು' ಎಂದು ಬೋರ್ಡ್ ಹಾಕಿಕೊಂಡು ಕುಳಿತಿದ್ದಾರೆ. ನೀವು ಇದನ್ನು ಈ ತಿದ್ದುಪಡಿಯಿಂದ ಕೈ ಬಿಡದಿದ್ದರೆ, ಈಗೇನು ಇದನ್ನು ತಂದಿದ್ದೀರೋ, ಇದು ಐದು ಪೈಸೆ ಕೂಡಾ ಉಪಯೋಗಕ್ಕೆ ಬರುವುದಿಲ್ಲ. ಪುಟ 4ರಲ್ಲಿ (ಡಿ)ಯಲ್ಲಿ 'ಅರಣ್ಯ ಭೂಮಿಯಾಗಿದ್ದಲ್ಲಿ, ಆ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ' ಎಂದು ಹೇಳಲಾಗಿದೆ. ನೀವು ಅರಣ್ಯ ಇಲಾಖೆಯವರನ್ನು ತೆಗೆದುಕೊಂಡು ಬಂದರೆ, ತೀರ್ಥಹಳ್ಳಿ ಟೌನ್‌ನಲ್ಲೂ ಕೂಡ ಅರಣ್ಯ ಇಲಾಖೆಯದೇ ಭೂಮಿ ಎಂದು ಪ್ರಮಾಣಪತ್ರ ಕೊಡುತ್ತಾರೆ. ಅವರು No objection Certificate ಅನ್ನು ಯಾವುದಕ್ಕೂ ಕೊಡುವುದಿಲ್ಲ.

ಎಲ್ಲವೂ ಕೂಡ ಅರಣ್ಯಕ್ಕೆ ಸೇರಿದ್ದು ಎಂದೇ ಹೇಳುತ್ತಾರೆ. ಆದ್ದರಿಂದ, ಖಂಡಿತವಾಗಿಯೂ ಕೂಡ ಆ term ಏನಿದೆಯೋ, ಅದನ್ನು ನೀವು ಕೈಬಿಡಬೇಕು. ಬೆಂಗಳೂರಿನಲ್ಲಿ ಅಥವಾ town-oriented ನಲ್ಲಿ 30x40 ಅಥವಾ 40x60 ಬಹಳ ದೊಡ್ಡದಾಗಿ ಕಾಣಬಹುದು. ಆದರೆ ನಮ್ಮ ಗ್ರಾಮೀಣ ಪ್ರದೇಶದಲ್ಲಿ ಹಾಗಿಲ್ಲ. ನಮ್ಮಲ್ಲಿ ಏನೆಂದರೆ, ಒಂದರ್ಧ ಎಕರೆ ಜಮೀನು ಮಾಡಿಕೊಂಡಿರುವವನು ಕಣ ಮಾಡಿಕೊಂಡಿರುತ್ತಾನೆ. ನೀವು 20x30 ಅಥವಾ 30x40 ಎಂದರೆ ಅದಕ್ಕೆ ಅರ್ಥವೇ ಇಲ್ಲ. ಆದ್ದರಿಂದ, 60x40 ಏನಿದೆಯೋ, ಅದು ಸರಿ ಇದೆ. ವ್ಯಕ್ತಿಗತವಾಗಿ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೋ, ಅದಕ್ಕೆ ಖಂಡಿತಾ ನಾನು ವಿರುದ್ಧವಿಲ್ಲ. It is my suggestion, Rural areas ನಲ್ಲಿ, ಅದರಲ್ಲೂ ನಮ್ಮ ಮಲೆನಾಡಿನಲ್ಲಂತೂ ಕೂಡ 60x40 ಕೂಡ ನಮಗೆ feasible ಅಲ್ಲ. ತಮಗೆ ಅದರ ಅರಿವಿದೆ. ಈಗೇನು 60x40 ಇದೆಯೋ, ಅದನ್ನು ವ್ಯಕ್ತಿಗತವಾಗಿ ನಾನು ಸ್ವೀಕರಿಸುತ್ತೇನೆ. ಎರಡನೆಯದಾಗಿ, (ಜೆ)ಯಲ್ಲಿ 'ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ, ಇದರ ಕರಾವಳಿ ವಲಯ ನಿಯಂತ್ರಣದಿಂದ ಆವೃತವಾಗಿರುವ ಪ್ರದೇಶದಲ್ಲಿದ್ದಲ್ಲಿ, ಆ ಭೂಮಿಯನ್ನು ಮಂಜೂರು ಮಾಡತಕ್ಕದ್ದಲ್ಲ' ಎಂದು ಇದೆ. ಈ ಎರಡೂ ಕಂಡೀಷನ್‌ಗೆ ವಿರುದ್ಧವಾಗಿದ್ದಲ್ಲಿ ಯಾವ ಮನೆಗೂ ಕೂಡ ಇವರು approval ಕೊಡುವುದಿಲ್ಲ. ಆದ್ದರಿಂದ, ಅವರೆಡನ್ನೂ delete ಮಾಡಿದರೆ ಏನೂ ಸಮಸ್ಯೆಯಾಗುವುದಿಲ್ಲ. ನನ್ನ ಒಂದು suggestion ಏನೆಂದರೆ, ನಮ್ಮಲ್ಲಿ 20–40 ವರ್ಷಗಳಿಂದ ಮನೆ ಇದೆ. ಅದಕ್ಕೆ ಕಂದಾಯವನ್ನು ಕಟ್ಟುತ್ತಿದ್ದಾರೆ. ಅದಕ್ಕೆ electrical connections ಇದೆ. ಎಲ್ಲವೂ ಇದೆ. ಅದನ್ನು ಅರಣ್ಯ ಭೂಮಿ ಎಂದು ಹೇಳಿ, ಹಕ್ಕುಪತ್ರವನ್ನು ಕೊಡುತ್ತಿಲ್ಲ, ಈಗಲೂ ಕೊಡುತ್ತಿಲ್ಲ. ನಮ್ಮಲ್ಲಿ ನಾಲ್ಕು ಸಾವಿರ ಮನೆಗಳು ಬಂದಿವೆ. ಇನ್ನೂರು ಮನೆಗಳನ್ನೂ ಕೊಡಲಿಕ್ಕೆ ನಮ್ಮ ಕೈಯ್ಯಲ್ಲಿ ಆಗುತ್ತಿಲ್ಲ. ಅದೇ ಉದ್ದೇಶದಿಂದಲೇ ಇದನ್ನು ತಂದಿರತಕ್ಕದ್ದು.

ಆದರೆ ಇಲ್ಲಿ problem ಏನೆಂದರೆ, ಮತ್ತೆ ಅದೇ ಅರಣ್ಯದ್ದು ಸಮಸ್ಯೆ ಇದರೊಳಗೆ ಇದೆ. ಆದ್ದರಿಂದ, ತಮ್ಮಲ್ಲಿ ವಿನಂತಿ ಮಾಡಿಕೊಳ್ಳತಕ್ಕದ್ದು ಏನೆಂದರೆ, ಆ ಅರಣ್ಯದ್ದು ಏನಿದೆ, ಅದನ್ನು delete ಮಾಡಿಬಿಡಿ. ಆ ಅರಣ್ಯದ condition ಏನಿದೆಯೋ, that should be deleted. ಏತಕ್ಕೆ ಎಂದರೆ, ಇಲ್ಲಿಯವರೆಗೂ survey ಆಗಿಲ್ಲ. There is no joint survey by independent India from the past 60 years. ಇಲ್ಲಿ Revenue land ಯಾವುದು? Forest land ಯಾವುದು? ಎನ್ನುವುದಕ್ಕೆ ಒಂದು ಟಿಪ್ಪಣಿ ಕಾಪಿಯನ್ನು ಇವತ್ತಿನವರೆಗೂ ಮಾಡಿಲ್ಲ. ಅರಣ್ಯ ಇಲಾಖೆಯವರು ಚಿತ್ರ ಬಿಡಿಸಿಕೊಂಡು ಬಿಟ್ಟು, ಎಲ್ಲವೂ 'ನಮಗೆ ಸೇರಿದ್ದು', 'ನಮಗೆ ಸೇರಿದ್ದು' ಎಂದು ಬಂದು ನಮಗೆ ತರಲೆ ಮಾಡುತ್ತಿದ್ದಾರೆ. Unless there is a joint survey, especially with respect to eight districts i.e., Mysore, Chamarajnagar, Shimoga, Chikmagalur, Madikeri South Canara, North Canara, Udupi and Dakshina Kannada ಜಿಲ್ಲೆ. Who are hit by this Act, a part of Hassan District is also there, ಇವು ಇಷ್ಟೂ ಜಿಲ್ಲೆಗಳಲ್ಲಿ ನೀವು ಒಂದು ಮನೆಯನ್ನೂ ಕೂಡ ಕೊಡುವುದಕ್ಕಾಗುವುದಿಲ್ಲ. ಯಾರ್ಯಾರು influence ಮಾಡಿ ಏನೇನು ಮಾಡಿದ್ದಾರೋ ಗೊತ್ತಿಲ್ಲ. But, ನಮ್ಮಲ್ಲಿ ಯಾವುದನ್ನು ಕೇಳಿದರೂ ಕೂಡ, ಅದಕ್ಕೆ ಅರಣ್ಯ ಇಲಾಖೆಯದ್ದು ರಗಳೆ ಇದೆ. ಆದ್ದರಿಂದ, those two conditions should be deleted. Real estate ಏನೊಂದು ನಡೆಯುತ್ತಿದೆಯೋ, ಅದು ಬೆಂಗಳೂರಿನಲ್ಲಿ ನಡೆಯಬಹುದು, ಶಿವಮೊಗ್ಗದಲ್ಲಿ ನಡೆಯಬಹುದು ಅಥವಾ ಇತರೆ ಟೌನ್‌ನಲ್ಲಿ ನಡೆಯಬಹುದು, ಆದರೆ ನಮ್ಮ rural ನಲ್ಲಿ ಆ ಸಮಸ್ಯೆಯಿಲ್ಲ. ಅಲ್ಲಿ ಕಣ ಇದೆ, ಹಿತ್ತಲ್ಲು ಇದೆ, ಬಸಲೆಸೊಪ್ಪು ಬೆಳೆದುಕೊಳ್ಳುತ್ತಾರೆ, ತೆಂಗಿನ ಗಿಡ ಎಲ್ಲವೂ ಇದೆ. 20x30 ರಲ್ಲಿ ಕಟ್ಟಿದರೆ ಅವನು ತೆಂಗಿನ ಮರವನ್ನು ಎಲ್ಲಿಗೆ ತೆಗೆದುಕೊಂಡು ಹೋಗಬೇಕು? He is

there. ಅವನೇ ಅದನ್ನು raise ಮಾಡಿರುವುದು. ಇದೇ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು, ನಾನು ತಮಗೆ ಹೇಳುತ್ತೇನೆ, ಮೊನ್ನೆ ಎಡೂರು ಸುಳಗೋಡು ಗ್ರಾಮದಲ್ಲಿ 40 ವರ್ಷಗಳಿಂದ ಮನೆಯೊಂದಕ್ಕೆ ಕಂದಾಯ ಕಟ್ಟುತ್ತಿದ್ದಾರೆ. 40 ವರ್ಷಗಳಿಂದ demand ಜಾಸ್ತಿಯಾಗುತ್ತಿದೆ, electrical connections ಇದೆ, 50–60 ವರ್ಷದ ತೆಂಗಿನ ಮರ ಇದೆ, ಅಡಿಕೆ ಮರ ಇದೆ, ಬುದ್ಧಿಮಾಂದ್ಯ ಮಗುವಿದೆ, ಫಾರೆಸ್ಟ್ ಇಲಾಖೆಯವರು ಹೆಣ್ಣುಮಕ್ಕಳನ್ನು ಅಕ್ಕಿ ಸಮೇತ ತೆಗೆದು ಮನೆಯಿಂದ ಹೊರಗೆ ಹಾಕಿದ್ದಾರೆ. Whether we are in independent India or not? ಖಂಡಿತವಾಗಿಯೂ ಕೂಡ ಬಡವರಿಗೆ ಏನು ಅನುಕೂಲ ಮಾಡಬೇಕೆಂದು ಈ ಕಾಯ್ದೆ ತಂದಿದ್ದೀರೋ, ಇದರೊಳಗೆ ನಾವು ವಿಳಂಬ ಮಾಡತಕ್ಕ ಅಗತ್ಯವಿಲ್ಲ. ನಮಗೆ ಮನೆ ಕೊಡಬೇಕು, ನಮ್ಮ ಜನರಿಗೆ ಮನೆ ಕೊಡಬೇಕು. ಕಂದಾಯ ಭೂಮಿಯ ವಿಚಾರಕ್ಕೆ ಬರುವುದಾದರೆ, ನಾವೇ ಒಂದು ಕಾನೂನು ಮಾಡಿ ಇಟ್ಟಿದ್ದೇವೆ. ಕಂದಾಯ ಭೂಮಿಯಲ್ಲಿ ಕಟ್ಟುವಂತಿಲ್ಲ, ಕಟ್ಟಿದರೆ ಅವರಿಗೆ 3 ವರ್ಷ ಜೈಲು ಮತ್ತು ಹೊರಗಡೆ ಹಾಕಬೇಕೆಂದು ನಾವೇ ಕಾನೂನು ಮಾಡಿದ್ದೇವೆ. ಆ ತರಹದ ಬಿಲ್ ಇದೆ. I am having a copy of it. ನಾನು ಮಾನ್ಯ ಅಧ್ಯಕ್ಷರ ಹತ್ತಿರ ನಿಯಮ 69ರ ಅಡಿಯಲ್ಲಿ ಪ್ರಸ್ತಾಪಿಸಲು ಅವಕಾಶ ಕೋರಿದ್ದೆ. I am having a copy of that Bill. 2007ರಲ್ಲಿ ಆಗಿರತಕ್ಕಂಥ amendment billನಲ್ಲಿ ಕಂದಾಯ ಭೂಮಿಯಲ್ಲಿ ನಾವು ಮನೆಗಳನ್ನು ಕಟ್ಟುವಂತಿಲ್ಲ, ಏಕೆಂದರೆ ಅದು Government ಗೆ ಸೇರಿದ್ದು. ಹಾಗಾದರೆ ಹೇಗೆ? I am unable to understand. 1952ರಲ್ಲಿ ಕರ್ನಾಟಕ ರಾಜ್ಯದ ಜನಸಂಖ್ಯೆ 2 ಕೋಟಿ ಇತ್ತು, ಇವತ್ತು 6 ಕೋಟಿ ಇದೆ. ಹಾಗಾದರೆ ಅದೇ ಜನ ಅಲ್ಲೇ ಇದ್ದಾರಾ? ನಾವು ಎಷ್ಟೊಂದು ಮನೆಗಳನ್ನು ಕಟ್ಟಿಲ್ಲ, ರಸ್ತೆಗಳನ್ನು ಮಾಡಿಲ್ಲ, ಡ್ಯಾಮ್ಸ್ ಕಟ್ಟಿಲ್ಲ. ಭೂಮಿ ಕಡಿಮೆಯಾಗಿದೆ. ಬಡವರು ಎಲ್ಲಿ ಮನೆ ಕಟ್ಟುತ್ತಾರೆ? ಅವನು ಎಲ್ಲಿ ಮನೆ ಕಟ್ಟಿದ್ದಾನೆ? ಸಾವಿರಾರು ಎಕರೆಗಳಷ್ಟು ಭೂಮಿ ಇರುವವರು ಇರಬಹುದು. ಒಂದು ಗುಂಟೆ ಜಾಗವಿಲ್ಲದಿರುವ

ಬಡವ ಸರ್ಕಾರಿ ಜಾಗದಲ್ಲೇ ಮನೆ ಕಟ್ಟುತ್ತಾನೆ. ಅದನ್ನು ಬಿಟ್ಟು ಅವನು ಇನ್ನೆಲ್ಲಿ ಕಟ್ಟಲಿಕ್ಕೆ ಸಾಧ್ಯವಿದೆ? ಸರ್ಕಾರಿ ಜಾಗದಲ್ಲಿ ಕಟ್ಟಬಾರದು ಎಂದರೆ ಹೇಗೆ? ಅವನು ಈ ದೇಶದಲ್ಲಿ ಹುಟ್ಟಬಾರದೇ? ಅವನು ಹುಟ್ಟಿದ್ದೇ ಅಪರಾಧವೇ? ಖಂಡಿತವಾಗಿಯೂ ಕೂಡ, ನೀವು ಆ ಅರಣ್ಯ ಕಾಯ್ದೆ ಮತ್ತು ಇದನ್ನು ತಿದ್ದುಪಡಿ ಮಾಡಬೇಕು. ಕಂದಾಯ ಕಾಯ್ದೆ ಏನಿದೆಯೋ, ಅದನ್ನೂ ಕೂಡ ತಿದ್ದುಪಡಿ ಮಾಡಬೇಕೆಂಬುದು ನನ್ನ ಒತ್ತಾಯವಾಗಿದೆ. ಎರಡು ಕಡೆಗಳಲ್ಲಿ 'ಅರಣ್ಯ' ಎನ್ನುವಂಥದ್ದು ಏನಿದೆಯೋ, ಅದನ್ನು ತೆಗೆದು ಹಾಕಬೇಕು. ನಮ್ಮಲ್ಲಿ KEBಯದು ಸಮಸ್ಯೆ ಏನಿದೆ ಎಂದರೆ, ನೀವು powe line ಎಳೆದುಕೊಂಡು ಹೋಗಿ ಬಿಟ್ಟಿದ್ದೀರಿ. 30–40 ವರ್ಷಗಳಿಂದ ಮನೆ ಕಟ್ಟಿರುವವನು ಅದರ ಕೆಳಗಡೆ ಇದ್ದಾನೆ. ಅವನ ಹತ್ತಿರ ದಾಖಲೆ ಇದೆ. ಮನೆ ಕಟ್ಟಿರುತ್ತಾನೆ. ಆದರೆ ಹಕ್ಕುಪತ್ರ ಇಲ್ಲ. ಆದ್ದರಿಂದ KEB ಯಿಂದ ಅವನಿಗೆ ಪರಿಹಾರ ಸಿಗುವುದಿಲ್ಲ. ಸರ್ಕಾರದಿಂದಲೂ ಅವನಿಗೆ ಪರಿಹಾರ ಸಿಗುವುದಿಲ್ಲ. ಅವನಿಗೆ Radio ಬರುವುದಿಲ್ಲ, TV ಬರುವುದಿಲ್ಲ, ಆತ ಬೇರೆ ಕಡೆ ಮನೆ ಕಟ್ಟಲಿಕ್ಕೆ ಆಗುವುದಿಲ್ಲ. ಆತ ಸರ್ಕಾರಿ ಭೂಮಿಯಲ್ಲಿದ್ದಾನೆ. ನಿಮ್ಮ ಇವತ್ತಿನ ಕಾನೂನಿನ ಪ್ರಕಾರ, 2007ರಲ್ಲಿ ನೀವೇನು ತಿದ್ದುಪಡಿಯನ್ನೇನು ನೀವು ತಂದಿರುತ್ತೀರೋ, ಅದರ ಪ್ರಕಾರ ನೀವು ಅವನನ್ನು ಜೈಲಿಗೆ ಹಾಕಬಹುದು. ಅವನು ಏನು ಅಪರಾಧ ಮಾಡಿದ್ದಾನೆ? ಅವನು ಈ ದೇಶದಲ್ಲಿ ಹುಟ್ಟಿದ್ದೇ ಅಪರಾಧವೇ? See, we are here to change the legislation. We have to do it. ಮಾನ್ಯ ಸಭಾಧ್ಯಕ್ಷರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇಂತಹ ಅವಘಡಗಳು ಏಕೆ ಆಗುತ್ತವೆ ಎಂದರೆ, ಇವತ್ತು ತರತಕ್ಕಂಥ legislation ಅನ್ನು ನಮಗೆ 15 ದಿನಗಳ ಮೊದಲೇ ಕೊಡಿ. ಎರಡು ತಿಂಗಳು ಮೊದಲೇ ಕೊಡಿ. ನಾವು ಓದುತ್ತೇವೆ, ತಿಳಿದುಕೊಂಡು ಬರುತ್ತೇವೆ.

ಆಮೇಲೆ let us have a debate. ಇದರೊಳಗೆ ಏನಾಗುತ್ತದೆಂದರೆ ಬೆಳಿಗ್ಗೆ ತಂದು ಈಗ ಬಿಲ್‌ನ್ನು ತಂದು ಕೊಟ್ಟರೆ ಏನಾಗುತ್ತದೆಂದರೆ ಸೆಕ್ಷನ್ 192(ಎ) ಎಂದರೆ ಯಾರಿಗೆ ಗೊತ್ತಿದೆ? ನಮ್ಮ ಹತ್ತಿರ ಈಗ ಕಾಯಿದೆ ಇಲ್ಲ.

We are not having a ready reckoner in our mind ನಾವು ಏನು ವಾದ ಮಾಡಿರತಕ್ಕಂಥದ್ದು, ನೀವೇನೋ ತಂದು ಹೇಳುತ್ತೀರಿ, ಇವರು ಯಾರೋ ಬಂದು ವಿರೋಧ ಮಾಡುತ್ತಾರೆ, there ends the matter. ಹತ್ತು ವರ್ಷವಾದ ಮೇಲೆ ಅದು ಅನುಷ್ಠಾನಕ್ಕೆ ಬರುತ್ತದೆ. ಹಿಂದೆ 2007 ರಲ್ಲಿ ಮಾಡಿರತಕ್ಕಂಥ ಕಾಯಿದೆ ಇವತ್ತು ನಮ್ಮ ಜನಗಳಿಗೆ ತೊಂದರೆ ಕೊಡುತ್ತಿದೆ. ಅದಕ್ಕಾಗಿ ನಾನು ಹೇಳತಕ್ಕಂಥದ್ದೇನೆಂದರೆ, ನೀವೇನು ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ಯೋಚನೆ ಮಾಡುತ್ತಿದ್ದೀರಿ ರೂರಲ್ ಏರಿಯಾಗಳಲ್ಲಿ ಇರುವವರಿಗೆ 60x40 ಎನ್ನುವುದು ಶೇಕಡ ನೂರರಷ್ಟು ಸರಿಯಿದೆ. ಅದನ್ನು ಇನ್ನೂ ಜಾಸ್ತಿ ಮಾಡಿದರೂ ತೊಂದರೆಯಿಲ್ಲ. ಬೆಂಗಳೂರು ರೂರಲ್ ಮತ್ತು ಟೌನ್‌ಶಿಪ್ ಬಗ್ಗೆ ನಾನು ಹೇಳುವುದಿಲ್ಲ. ಇದನ್ನು ಅರಣ್ಯದ್ದು ಏನಿದೆ ಅದನ್ನು ತೆಗೆದು ಹಾಕಬೇಕು. ಇಲ್ಲಿ ಈಗ ಕಂದಾಯ ಸಚಿವರು ಇದ್ದೀರಿ ಮತ್ತು ಉಪ ಮುಖ್ಯಮಂತ್ರಿಗಳು ಇದ್ದೀರಿ. ಈ ಅರಣ್ಯದ್ದು ಇದರಲ್ಲಿ ಬಹಳ ದೊಡ್ಡ ಸಮಸ್ಯೆಯಿದೆ.. ಏನಿದೆಯೆಂದರೆ, ನಮ್ಮ ಶಿವಮೊಗ್ಗ ಡಿಸ್ಟ್ರಿಕ್ಟ್‌ನಲ್ಲಿ ಹತ್ತಾರು ಪ್ರತಿಭಟನೆಗಳಾಗಿರುವುದು ತಮಗೆ ಗೊತ್ತಿದೆ. ಸಾರ್ ತಮಗೆ ನಾನು ಹೇಳುತ್ತೇನೆ. ಒಂದೇ ಒಂದು ಸರ್ವೆ ನಂಬರ್‌ನ್ನು ಇವತ್ತಿನವರೆಗೆ measure ಮಾಡಿಲ್ಲ. Which is the forest land and which is the revenue land ಎಂದು ಮಾಡಿಲ್ಲ. ನಾನು ಕಮಿಟಿ ಮೀಟಿಂಗ್‌ನಲ್ಲಿ ಪ್ರಿನ್ಸಿಪಾಲ್ ಸೆಕ್ರೆಟರಿಯವರಿಗೆ ಹೇಳಿದೆ, ನೀವು ಒಂದು ಸರ್ವೆ ನಂಬರ್‌ನ್ನು bifurcate ಮಾಡಿ ತೋರಿಸಿ I will tender my resignation ಎಂದು ನಾನು ಹೇಳಿದ್ದೆ. You show me the single Survey Number which has been surveyed and bifurcated by means and bounds. In each survey number, that has not been done. ಅದು ಇಲ್ಲದೇ ನಾವು ಜನರನ್ನು ಹೊರಗೆ ಹಾಕುತ್ತೇವೆಂದರೆ ನಾವು ಸ್ವತಂತ್ರ ಭಾರತದ ಲ್ಲಿದ್ದೇವೋ ಅಥವಾ ನಾವು ಎಲ್ಲಿದ್ದೇವೆ? ಆದುದರಿಂದ ಈ ಕಾಯಿದೆಯಲ್ಲಿ ನೀವೇನು ತಂದಿದ್ದೀರಿ, ಬಡವರಿಗೆ ಅನುಕೂಲ ಆಗತಕ್ಕಂಥದ್ದರೊಳಗೆ

ಖಂಡಿತ ನನ್ನ ವ್ಯಕ್ತಿಗತವಾಗಿ ನನ್ನ ಅಭಿಮತವಿದೆ. ಈಗಾಗಲೇ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಾರೋ ಅದಕ್ಕೆ ನಾನು abide ಆಗುತ್ತೇನೆ. ಆದರೆ 60x40 ಎನ್ನುವ ಒಂದು ವಿಚಾರದಲ್ಲಿ ಮತ್ತು ಅರಣ್ಯ ಮತ್ತು ಪರಿಸರ 'ಬಿ' ಮತ್ತು 'ಜೆ' ಏನಿದೆ ಖಂಡಿತ ಅದನ್ನು delete ಮಾಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ, ನಮ್ಮ ಗ್ರಾಮ ಪಂಚಾಯತಿಗಳಲ್ಲಿ ಸೆಕ್ರೆಟರಿಗಳು ಅವರ್ಯಾರು ಕೊಡುವುದೇ ಇಲ್ಲ. ಫಾರೆಸ್ಟ್‌ನವರು ಎಲ್ಲದಕ್ಕೂ ಅಡತಡೆ ಮಾಡುತ್ತಾರೆ. ಈ ಫಾರೆಸ್ಟ್‌ನವರ ಗಲಾಟೆಯಿಂದ ಬಗರ್‌ಹುಕುಂ ಜಮೀನು ಮಂಜೂರು ಮಾಡುವುದಕ್ಕೆ ಆಗುತ್ತಿಲ್ಲ. ಈ ವಿಷಯದ ಬಗ್ಗೆ ಬೇರೆ ಸಂದರ್ಭದಲ್ಲಿ ಚರ್ಚೆಗೆ ಅವಕಾಶ ಕೊಟ್ಟಾಗ ನಾನು ಮಾತನಾಡುತ್ತೇನೆ. ಇದರೊಳಗೆ ನನ್ನ ವಿಚಾರವಿಷ್ಟೆ, ಅವೆರಡು ತಿದ್ದುಪಡಿಗಳನ್ನು ತಾವು ಮಾಡಬೇಕು, ಅವೆರಡನ್ನೂ ಕೈಬಿಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಹೆಚ್. ಗೋಪಾಲ್ ಭಂಡಾರಿ (ಕಾರ್ಕಳ) : ಮಾನ್ಯ ಅಧ್ಯಕ್ಷರೆ, ಈಗಾಗಲೇ ಮಾನ್ಯ ಕಿಮ್ಮನೆ ರತ್ನಾಕರ್‌ರವರು ಹೇಳಿದಂತೆ, ಭೂ ರಹಿತರಿಗೆ, ಬಹಳ ಬಡವರಿಗೆ ನಿವೇಶನವನ್ನು ಮಂಜೂರು ಮಾಡಿಕೊಡುವ ವಿಚಾರದಲ್ಲಿ ನಮ್ಮ ಸಹಮತವಿದೆ. ಆದರೆ ಇದರಲ್ಲಿ ನಗರ ಪ್ರದೇಶದಲ್ಲಿ ಎಂದು ಇದೆ. ಬಹುಶಃ ನನಗನ್ನಿಸುತ್ತಿದೆ, ಈಗ ಇರತಕ್ಕಂಥ ಕಾಯಿದೆಯಲ್ಲಿ ಯಾರಿಗೂ ಭೂಮಿ ಕೊಡುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ರೀತಿಯಲ್ಲಿ ಕೆಲವು ಕಟ್ಟುನಿಟ್ಟಿನ ತಡೆಗಳು ಇದರಲ್ಲಿದೆ. ನಮ್ಮಲ್ಲಿದೆ. ನಮ್ಮಲ್ಲಿ ಪುರಸಭೆ ಮತ್ತು ಗಡಿಯಲ್ಲಿರತಕ್ಕಂಥ 5 ಕಿ.ಮೀ. ವ್ಯಾಪ್ತಿಯವರೆಗೆ ಕೊಡುವುದಕ್ಕೆ ಆಗುವುದಿಲ್ಲ ವೆಂದು ಇದರಲ್ಲಿದೆ. ಪುರಸಭೆ ಎಂದರೆ, ನನ್ನ ಮತಕ್ಷೇತ್ರ ಕಾರ್ಕಳದಿಂದ 5 ಕಿ.ಮೀ. ವ್ಯಾಪ್ತಿ ಎಂದಕೂಡಲೇ ಅಲ್ಲಿ ಸುಮಾರು ಏಳು ಗ್ರಾಮಗಳು ಹೋಗಿಬಿಡುತ್ತವೆ. ಏಳು ಗ್ರಾಮಗಳಲ್ಲಿ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಅದೊಂದು ತಡೆಯಾದರೆ, ಮಾನ್ಯ ಅಧ್ಯಕ್ಷರೆ, ಇಲ್ಲಿ ನೋಡಿ, ತಾವು ನೋಡಿದ್ದೀರಿ, ನಮಗೆ ಕೊಟ್ಟಂಥ ಪ್ರತಿಯಲ್ಲಿ ಪುರಸಭೆಗಳು ಮತ್ತು ಗ್ರಾಮ ಪಂಚಾಯತಿಯ ಹೊರಗಿನ ವರ್ತುಲದಿಂದ, 3 ಕಿ.ಮೀ. ಮಿತಿಯೊಳಗೆ ಇರುವ ಅನಧಿಕೃತ ಕಟ್ಟಡಗಳನ್ನು ಸಕ್ರಮಗೊಳಿಸತಕ್ಕದ್ದಲ್ಲ ಎಂದು ಇದರಲ್ಲಿದೆ.

ಹಾಗಾದರೆ ಎಲ್ಲಿ ಕೊಡುತ್ತಾರೆ? ಒಂದು ಗ್ರಾಮ ಪಂಚಾಯತಿಯ ಹೊರ ವರ್ತುಲದಿಂದ ಮೂರು ಕಿ.ಮೀ. ಹೊರಗಡೆ ಇನ್ನೊಂದು ಗ್ರಾಮ ಪಂಚಾಯತಿ ಬರುತ್ತದೆ. ಹಾಗಾದರೆ ಕೊಡುವುದು ಎಲ್ಲಿ ಮಾನ್ಯ ಅಧ್ಯಕ್ಷರೆ? ಈ ರೀತಿ ಕಾಯಿದೆ ಮಾಡಿದರೆ ಸಾಕೇ ಅಥವಾ ಬಡವರಿಗೆ ನಿವೇಶನ ಸಿಗಬೇಡವೇ ಎನ್ನುವುದೇ ನನ್ನ ಪ್ರಶ್ನೆ. ಇದನ್ನು ತಿದ್ದುಪಡಿ ಮಾಡಬೇಕಾ ಗುತ್ತದೆ. ಇದು ಬೆಂಗಳೂರು ಅಥವಾ ಬಹಳ ದೊಡ್ಡ ದೊಡ್ಡ ಮಹಾನಗರ ಪಾಲಿಕೆಗಳಿಗೆ ಬೇಕಾದರೆ 30x40 ಮಾಡಲಿ. ಮಾನ್ಯ ಕಿಮ್ಮನೆ ರತ್ನಾಕರ್ ರವರು ಹೇಳಿದ ಹಾಗೆ ಹಳ್ಳಿ ಪ್ರದೇಶಗಳಲ್ಲಿ 60x40 ಮಾಡುವುದರಲ್ಲಿ, ಅದರಲ್ಲಿ ತೊಂದರೆ ಆಗುವುದಿಲ್ಲವೆಂಬುದು ನನ್ನ ಅನಿಸಿಕೆ. ಅದನ್ನು ಹಳ್ಳಿಗೇ ಉಳಿಸಿಕೊಳ್ಳುವುದು ಬಹಳ ಸೂಕ್ತ ಎನ್ನುವುದರ ಜೊತೆಗೆ ಈ ತಿದ್ದುಪಡಿ ಯನ್ನು ಮಾಡಬೇಕು. ಇನ್ನೊಂದು ಮಾನ್ಯ ಅಧ್ಯಕ್ಷರೆ, ಖಂಡಿತವಾಗಿಯೂ ಕೂಡ ಒಂದೂ ಮಂಜೂರು ಮಾಡುವುದಕ್ಕೆ ಸಾಧ್ಯವಾಗದೇ ಇರತಕ್ಕಂಥ ಒಂದು ಪರಿಸ್ಥಿತಿಯಲ್ಲಿ ನಾವಿದ್ದೇವೆ. ಕಾರಣವೇನೆಂದರೆ, ನಮ್ಮ ಜಿಲ್ಲೆಯಲ್ಲಿ 'ಸಿ' ಕ್ಲಾಸ್ ಮತ್ತು 'ಡಿ' ಕ್ಲಾಸ್ ಜಮೀನು ಯಾವುದೆಲ್ಲ ಇದೆಯೋ ಅದರ ಬಗ್ಗೆ ತಮಗೆ ಗೊತ್ತಿದೆ. ಮಾನ್ಯ ಅಧ್ಯಕ್ಷರೆ, ತಮ್ಮ ಭಾಗದಲ್ಲಿಯೂ ಇದೆ. 'ಸಿ' ಮತ್ತು 'ಡಿ' ಕ್ಲಾಸ್ ಜಮೀನನ್ನು ಎಲ್ಲವೂ Deemed Forest ಎಂದು ಹೇಳಿ ಒಂದು ಪರಿಣಿತರ ಸಮಿತಿ ಈಗಾಗಲೇ ಸುಪ್ರೀಂಕೋರ್ಟ್‌ನಲ್ಲಿ ಅಫಿಡವಿಟ್ ಹಾಕಿದ್ದಾರೆ. ಒಂದು ಸೆಂಟ್ ಜಾಗ ಕೂಡ ಕಂದಾಯ ಜಮೀನಿಲ್ಲ, ಸರ್ಕಾರಿ ಜಾಗವಿಲ್ಲ. ಎಲ್ಲಿ ಕೊಡುತ್ತಾರೆ? ನಮ್ಮಲ್ಲಿರತಕ್ಕಂಥ ಕೆಲವು ಆಸ್ಪತ್ರೆಗಳು, ಸರ್ಕಾರಿ ಕಛೇರಿಗಳು ಕೂಡ Deemed Forest ಎಂದು ಹೇಳಳಾಗಿದೆ. ಅದನ್ನು Deemed Forest ನಲ್ಲಿ ಸೇರಿಸಿದ್ದಾರೆ. ಆ Deemed Forest ಅನ್ನು ಸರಿ ಮಾಡತಕ್ಕಂಥ ವ್ಯವಸ್ಥೆಯನ್ನು ಸರ್ಕಾರ ಮಾಡದೇ ಇದ್ದರೆ ಯಾರಿಗೂ ಹಕ್ಕುಪತ್ರ ಕೊಡುವುದಕ್ಕೆ ಆಗುವುದಿಲ್ಲ. ಅಲ್ಲಿ ಅರಣ್ಯ ಇಲಾಖೆ ಎಲ್ಲದಕ್ಕೂ ಕೂಡ ತನ್ನ ಆಕ್ಷೇಪವನ್ನು ಹಾಕುತ್ತಿದೆ. ಅರಣ್ಯ ಇಲಾಖೆ ಎಲ್ಲ ಕಡತಗಳಿಗೂ ತನ್ನ ಆಕ್ಷೇಪವನ್ನು ಹಾಕುತ್ತಿದೆ. ನಾನು ನೋಡಿದ್ದೇನೆ, ಅಕ್ರಮ ಸಕ್ರಮ

ಸಮಿತಿಯ ಎಲ್ಲ ಕಡತಗಳಲ್ಲಿಯೂ ಕೂಡ ಇದು Deemed Forest, ಸುಪ್ರೀಂ ಕೋರ್ಟಿಗೆ ಒಂದು ಪರಿಣಿತರ ಸಮಿತಿ ಈ ಬಗ್ಗೆ ಪಟ್ಟಿ ಕೊಟ್ಟಿದೆಯೆಂದು ಹೇಳಿದ್ದಾರೆ. ಆ ಪರಿಣಿತರ ಸಮಿತಿ ವಾಸ್ತವಾಂಶಗಳನ್ನು ನೋಡಿ ಹಾಕಿಲ್ಲ. ಅಲ್ಲಿ ಆಸ್ಪತ್ರೆ ಇದೆ, ಶಾಲೆಯಿದೆ, ಅಂಗನವಾಡಿಯಿದೆ, ನೂರು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವಂಥವರೂ ಕೂಡ ಇದ್ದಾರೆ. ಆ ಜಾಗವನ್ನೆಲ್ಲ ಇವತ್ತು Deemed Forest ಎಂದು ಹೇಳುತ್ತಿದ್ದಾರೆ. ಒಂದು ಗಿಡವೂ ಇಲ್ಲದೇ ಇರತಕ್ಕಂಥ ಜಾಗವನ್ನೆಲ್ಲ ಸುಪ್ರೀಂ ಕೋರ್ಟ್‌ಗೆ ಕಣ್ಣು ಮುಚ್ಚಿಕೊಂಡು ಇವತ್ತು ಪರಿಣಿತರ ಸಮಿತಿ ಅಫಿಡವಿಟ್ ಹಾಕಿ ಒಂದು ಇಂಚು ಜಾಗವನ್ನೂ ಕೂಡ ಇವತ್ತು ಬಡವರಿಗೆ ಮಂಜೂರು ಮಾಡಲು ಆಗದೇ ಇರತಕ್ಕಂಥ ಪರಿಸ್ಥಿತಿ ಇರುವಾಗ ಇದನ್ನು ಹಿಡಿದುಕೊಂಡು ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆ? ಪುನಃ ಇದರಲ್ಲಿ ಅರಣ್ಯ ಎಂದು ಹೇಳಿ ಕಟ್ಟುನಿಟ್ಟನ್ನು ಹಾಕಿದ್ದಾರೆ. ಕೆಲವು ಸರ್ವೆ ನಂಬರ್ ಗಳಲ್ಲಿ ಒಂದು, ಒಂದೂವರೆ ಸಾವಿರ ಎಕರೆಯಿದ್ದರೆ ಅದರಲ್ಲಿ ನೂರು ಎಕರೆ ಅರಣ್ಯವಿದ್ದರೆ ಇನ್ನು ಒಂಬೈನೂರು ಎಕರೆ ಸರ್ಕಾರಿ ಜಾಗವಿದ್ದರೂ ಕೂಡ ಅದನ್ನು ಕಿಮ್ಮನೆ ರತ್ನಾಕರ್‌ರವರು ಹೇಳಿದ ಹಾಗೆ ವಿಂಗಡಣೆಯನ್ನು ಮಾಡಿಲ್ಲ. ವಿಭಜನೆ ಮಾಡಿಲ್ಲ. ಅರಣ್ಯ ಇಲಾಖೆ ಇದರಲ್ಲಿ ಅರಣ್ಯ ಭೂಮಿಯಿದೆಯಾದ್ದರಿಂದ ಇದಕ್ಕೆ ಆಕ್ಷೇಪವಿದೆಯೆಂದು ಹೇಳಿಬಿಡುತ್ತದೆ. ಕಂದಾಯ ಇಲಾಖೆ ಅಧಿಕಾರಿಗಳು ಅಂಥದ್ದನ್ನು ಮುಟ್ಟುವುದಕ್ಕೂ ಹೋಗುವುದಿಲ್ಲ. ಅಲ್ಲಿ ಸುಪ್ರೀಂ ಕೋರ್ಟಿನಲ್ಲಿ ಪರಿಣಿತರ ಸಮಿತಿ ಆಫಿಡವಿಟ್ ಹಾಕಿದ್ದಾರೆ. ಇದಕ್ಕೆ ಸುಪ್ರೀಂ ಕೋರ್ಟ್‌ನ ತಡೆಯಿದೆಯೆಂದು ಹಾಕಿದ ಕೂಡಲೇ ಯಾರೂ ಕೂಡ ಅಂಥದ್ದನ್ನು ಮುಟ್ಟುವುದಕ್ಕೆ ಹೋಗುವುದಿಲ್ಲ. ಆದುದರಿಂದ, ನೀವು ಬಿಲ್ ಅನ್ನು ಮಾಡುವಂಥದ್ದು ಸರಿಯಿದೆ. ಆದರೆ ಈ ಎಲ್ಲಾ ತಡೆಗಳನ್ನು ಮೊದಲು ಸರಿಮಾಡಿಕೊಳ್ಳಬೇಕು. ಕಂದಾಯ ಇಲಾಖೆ ಅಧಿಕಾರಿಗಳಿರಬಹುದು, ಮಾನ್ಯ ಮಂತ್ರಿಗಳಾದ ತಾವು ಈ ಸಮಸ್ಯೆಗಳನ್ನೆಲ್ಲ ಮೊದಲು ತಿಳಿದುಕೊಂಡು ಇದಕ್ಕೆ ಪರಿಹಾರವನ್ನು ಹುಡುಕಿ ನಿಜವಾದ ಬಡವರಿಗೆ ಅದನ್ನು ಕೊಡಬೇಕಾದರೆ ಆ Deemed

Forest ಸಮಸ್ಯೆಯನ್ನು ಪರಿಹಾರ ಮಾಡಿ. ಇದರ ಜೊತೆಗೆ ಅರಣ್ಯ ಸಮಸ್ಯೆಯನ್ನು ಪರಿಹಾರ ಮಾಡಿಕೊಳ್ಳಿ. ಆ ನಂತರ ಇಲ್ಲಿ ಗ್ರಾಮ ಪಂಚಾಯತಿಯ ಹೊರ ವರ್ತಲದಿಂದ ಮೂರು ಕಿ.ಮೀ.ನ ದೂರದ ತನಕ ಕೊಡುವುದಕ್ಕೆ ಆಗುವುದಿಲ್ಲವೆಂದು ಇದರಲ್ಲಿ ಬರೆದಿದ್ದಾರೆ. ಒಂದು ಗ್ರಾಮ ಪಂಚಾಯತಿಯ ಹೊರ ವರ್ತುಲದಿಂದ ಮೂರು ಕಿ.ಮೀ. ಹೋದಮೇಲೆ ಇನ್ನೊಂದು ಗ್ರಾಮ ಪಂಚಾಯತಿ ಬರುತ್ತದೆ. ಆ ಗ್ರಾಮ ಪಂಚಾಯತಿಯ ಹೊರ ವರ್ತುಲದಿಂದ ಎಲ್ಲಿ ಕೊಡುತ್ತಾರೆ? ಮೇಲೆ ಕೊಡಬೇಕಾಗುತ್ತದೆ, ಮೂರು ಕಿ.ಮೀ.ನ ಒಳಗಡೆಯ ಭೂಮಿಯಲ್ಲಿದ್ದವರಿಗೆ ಕೊಡುವುದಕ್ಕೆ ಆಗುವುದಿಲ್ಲ. ಆದುದರಿಂದ ಒಟ್ಟಾರೆ ಕಾನೂನನ್ನು ಮಾಡಿಬಿಟ್ಟರೆ ಆಗುವುದಿಲ್ಲ. ಸರಿಯಾಗಿ ಇದನ್ನು ನೋಡಿ ಇದರ ತಿದ್ದುಪಡಿಯನ್ನು ಮಾಡಿ ಜನರಿಗೆ, ಪಾಪದವರಿಗೆ, ಬಡವರಿಗೆ, ಅನೇಕ ವರ್ಷಗಳಿಂದ ಸರ್ಕಾರಿ ಜಾಗದಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿರುವವರಿಗೆ ಕೊಡುವುದಕ್ಕೆ ಬೇಕಾಗಿರತಕ್ಕಂಥ ರೀತಿಯಲ್ಲಿ ಒಂದು ಕಾನೂನನ್ನು ಮಾಡಿ. ನಾವು ಈಗಾಗಲೇ ಮಾಡಿದ್ದೇವೆ ಎಂದು ಹೇಳಿದರೆ ಸಾಕಾಗುವುದಿಲ್ಲ. ಮಾಡಿದ್ದು ಯಾರಿಗೆ ಮುಟ್ಟಬೇಕೋ ಅವರಿಗೆ ಮುಟ್ಟಬೇಕಾಗುತ್ತದೆ. ಎಲ್ಲಿಗೆ ತಲುಪಬೇಕೋ ಅಲ್ಲಿಗೆ ತಲುಪಿಸಬೇಕಾ ಗುತ್ತದೆ. ಆ ನಿಟ್ಟಿನಲ್ಲಿ ಸರಿಯಾದಂಥ ತಿದ್ದುಪಡಿಗಳನ್ನು ಮಾಡಿ ಇದನ್ನು ಮಾಡುವುದು ಸೂಕ್ತವೆಂದು ನಾನು ಹೇಳಬಯಸುತ್ತೇನೆ.

ಶ್ರೀ ಕೆ.ಜಿ. ಕುಮಾರಸ್ವಾಮಿ (ಶಿವಮೊಗ್ಗ ಗ್ರಾಮಾಂತರ) : ಮಾನ್ಯ ಅಧ್ಯಕ್ಷರೆ, ಶಿವಮೊಗ್ಗ ಜಿಲ್ಲೆಯಲ್ಲಿರತಕ್ಕಂಥ ಎಲ್ಲಾ ಜಮೀನನ್ನು ಅರಣ್ಯವೆಂದು ಹೇಳುತ್ತಿದ್ದಾರೆ. ಸುಮಾರು ಆರು ಲಕ್ಷ ಎಕರೆಯ ಭೂಮಿ ಅರಣ್ಯವೆಂದು ಈಗಾಗಲೇ ನೋಟಿಫಿಕೇಶನ್ ಆಗಿದೆ. ಕಳೆದ ಎರಡು ತಿಂಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಡಿ.ಸಿ.ಯವರು ಒಂದು ಆದೇಶವನ್ನು ಹೊರಡಿಸಿ ಇಂಡೀಕರಣ ಎಂದು ಮಾಡಿ ಎಲ್ಲಾ ರೈತರನ್ನು ಮತ್ತು ಗ್ರಾಮೀಣ ಪ್ರದೇಶ ದಲ್ಲಿರತಕ್ಕಂಥವರನ್ನು ಹೆದರಿಸುತ್ತಿದ್ದಾರೆ. ಇದರ ಜೊತೆಯಲ್ಲಿ ಇಂಡೀಕರ ಣವೆಂದು ಹೇಳಿ ಹಿಂದೆ 1928, ಬ್ರಿಟಿಷರ ಕಾಲದಲ್ಲಿ 1895 ನೇ ಇಸವಿಯಲ್ಲಿ ಏನು ಅರಣ್ಯವೆಂದು ಹೇಳಲಾಗಿದೆಯೋ ಅದು ಯಾವುದೂ ಕೂಡ

ಇವತ್ತಿನವರೆಗೆ bifurcation ಆಗಿಲ್ಲ. ಕಂದಾಯ ಮತ್ತು ಅರಣ್ಯ ಇಲಖೆ ಎರಡೂ ಕೂಡ ಇವತ್ತಿನವರೆವಿಗೆ ಈ ಬಗ್ಗೆ ಜಂಟಿ ಸರ್ವೆ ಮಾಡಿಲ್ಲ. ತಮ್ಮ ಜಾಗ ಯಾವುದು ಎಂದು ಗುರುತು ಹಚ್ಚಿಕೊಂಡಿಲ್ಲ. ಕಂದಾಯ ಇಲಾಖೆಯೂ ಗುರುತು ಹಚ್ಚಿಕೊಂಡಿಲ್ಲ. ಈ ಕಡೆ ಅರಣ್ಯ ಇಲಾಖೆ ಕೂಡ ಗುರುತು ಹಚ್ಚಿಕೊಂಡಿಲ್ಲ. ಇವರಿಬ್ಬರೂ ಕೂಡ ಗುರುತು ಹಚ್ಚಿಕೊಂಡರೆ ಒಳ್ಳೆಯದು. ಎಲ್ಲಿ ಅವರ ಜಾಗವಿದೆಯೆಂದು ಗೊತ್ತಿಲ್ಲದೆ ಎಲ್ಲಾ ರೈತರನ್ನು ಒಕ್ಕಲೆಬ್ಬಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಇತ್ತೀಚೆಗೆ ಇಂಡೀಕರಣವೆಂದು ಮಾಡಿ ಶಿವಮೊಗ್ಗದಲ್ಲಿರತಕ್ಕಂಥ ಬಸ್‌ಸ್ಟ್ಯಾಂಡ್ ಇರಬಹುದು, ಎಸ್.ಪಿ. ಆಫೀಸ್ ಇರಬಹುದು, ಮಲೆನಾಡು ಅಭಿವೃದ್ಧಿ ಮಂಡಳಿಯ ಆಫೀಸ್ ಇರಬಹುದು, ಇವೆಲ್ಲವೂ ಕೂಡ ಅರಣ್ಯದೊಳಗೆ ಇದೆ. Buffer Zone ಎಂದರೆ ಮತ್ತೆ ಅಲ್ಲಿಂದ ನೂರು ಮೀಟರ್ ಎಂದು ಹೇಳುತ್ತಾರೆ. ಅಲ್ಲಿರತಕ್ಕಂಥ ಮೆಡಿಕಲ್ ಕಾಲೇಜ್, ಮೆಗ್ಗಾನ್ ಆಸ್ಪತ್ರೆ, ಇವೆಲ್ಲವೂ ಕೂಡ ಇವತ್ತು ಅರಣ್ಯದೊಳಗೆ ಇವೆ. ಹೀಗಾಗಿ ಮೊನ್ನೆ ಕೂಡ ಅರಣ್ಯ ಇಲಾಖೆ ಸಚಿವರು ನನಗೆ ಉತ್ತರವನ್ನು ಕೊಟ್ಟಿದ್ದಾರೆ. ಅರಣ್ಯ Buffer Zone ನಲ್ಲಿರುವಂಥ ಜಾಗವನ್ನು ಕೂಡ ಇವತ್ತು ಅವರು ಶಿವಮೊಗ್ಗ ನಗರದಲ್ಲಿ ಎತ್ತಿಸುವುದಕ್ಕಾಗುತ್ತಿಲ್ಲ. ಬಹುಭಾಗ ಬಡಾವಣೆ ಕೂಡ ಇವತ್ತು ಅರಣ್ಯದೊಳಗೆ ಇದೆ. ಅಲ್ಲಿ ಸುಮಾರು 286 ಎಕರೆ ಜಾಗ ಶ್ರೀಗಂಧ ಕಾವಲ್ ಎಂದು ಇದೆ. ಆ ಶ್ರೀಗಂಧ ಕಾವಲ್ ಅನ್ನೂ ಕೂಡ ಇವತ್ತು ಅರಣ್ಯವೆಂದು ಹೇಳಿದ್ದಾರೆ. ಇವತ್ತು ಅಲ್ಲೆಲ್ಲಾ ಬಡಾವಣೆಗಳಾಗಿದೆ. ಆದರೆ ಇಲ್ಲಿ ಜಿಲ್ಲಾಧಿಕಾರಿಗಳಾಗಲಿ, ಕಂದಾಯ ಇಲಾಖಾಧಿಕಾರಿಗಳಾಗಲಿ, ಅರಣ್ಯ ಇಲಾಖಾಧಿಕಾರಿಗಳಾಗಲಿ ತಮ್ಮ ಜಾಗ ಯಾವುದು ಎಂದು ಗುರುತು ಮಾಡಿಕೊಳ್ಳದೆ ಇವತ್ತು ಅಲ್ಲಿ ಬಸ್ ಸ್ಟ್ಯಾಂಡ್ ನಿರ್ಮಾಣ ಮಾಡುವುದಕ್ಕೆ ಬಿಟ್ಟಿದ್ದಾರೆ. ಆ ರೀತಿಯೊಳಗೆ ಮಾಡುತ್ತಿದ್ದಾರೆ. ಇವತ್ತು ಕಂದಾಯ ಸಚಿವರು ಬಿಲ್ ಅನ್ನು ತಂದಿದ್ದಾರೆ, ದಯಮಾಡಿ ಇದನ್ನು ತಿದ್ದುಪಡಿ ಮಾಡಬೇಕು. ಈ ಅರಣ್ಯ ಭೂಮಿ ಜಾಗವೇನಿದೆ ಅದನ್ನು ಕೈಬಿಡಬೇಕು. ಇದರ ಜೊತೆಯೊಳಗೆ 'ಜೆ'

ಯಲ್ಲಿರತಕ್ಕಂಥ ಪರಿಸರ ಮತ್ತು ಅರಣ್ಯ ಮಂತ್ರಾಲಯ, ಭಾರತ ಸರ್ಕಾರ ಎಂದು ಏನು ಹೇಳಲಾಗಿದೆ ಇವೆರಡನ್ನೂ ಕೈಬಿಟ್ಟರೆ ಮಾತ್ರ, ಇವತ್ತು ಇವರೇನು ಬಡವರಿಗೆ ಮನೆ ಕೊಡಬೇಕೆಂದು ಹೇಳಿ ಕಾನೂನನ್ನು ಮಾಡಿದ್ದಾರೆ ಈ ಕಾನೂನಿಗೆ ಒಂದು ಒಳ್ಳೆಯ ಬೆಲೆ ಸಿಗುತ್ತದೆ. ಇದರ ಜೊತೆಯಲ್ಲಿ ಬಡವರಿಗೆ ಅನುಕೂಲವಾಗುತ್ತದೆ. ಇವತ್ತು 30x40 ಕೊಟ್ಟರೆ ನಮ್ಮಲ್ಲಿ ದನ ಕಟ್ಟುತ್ತಾರೆ. ಇವತ್ತು ಹೈನುಗಾರಿಕೆಗೆ ಸರ್ಕಾರ ಉತ್ತೇಜನ ಕೊಡುತ್ತಿದೆ. ಹೈನುಗಾರಿಕೆ ಮಾಡಬೇಕಾದರೆ ಹಳ್ಳಿಗಳಲ್ಲಿ ದನ ಕಟ್ಟುತ್ತಾರೆ. ದನಗಳನ್ನು ಹೊರಗಡೆ ಬಿಡುವುದಕ್ಕಾಗುವುದಿಲ್ಲ. ಅದಕ್ಕಾಗಿಯೇ ಕೊಟ್ಟಿಗೆ ಕಟ್ಟಿಕೊಳ್ಳಬೇಕಾಗುತ್ತದೆ.

ಅದನ್ನು ಕೊಟ್ಟಿಗೆಯಲ್ಲಿ ಇಟ್ಟುಕೊಂಡು ಹುಲ್ಲು ಮತ್ತು ಮುಸುರೆ ಇಡಬೇಕಾಗುತ್ತದೆ. ಆ ರೀತಿ ನಾವು ಎಲ್ಲಾ ವ್ಯವಸ್ಥೆ ಇಟ್ಟುಕೊಳ್ಳಬೇಕಾಗುತ್ತದೆ. ಹಾಗಾಗಿ ನಮ್ಮ ಮಾನ್ಯ ಸದಸ್ಯರಾದ ಕಿಮ್ಮನೆ ರತ್ನಾಕರ್‌ರವರು ಏನು ಹೇಳಿ ದಂತೆ 40x60 ಕೊಟ್ಟರೂ ಕೂಡ ಕಡಿಮೆಯಾಗುತ್ತದೆ. ಮಲೆನಾಡು ಪ್ರದೇಶದ ವರಿಗೆ ಕನಿಷ್ಠ ಒಂದು ಎಕರೆ ಜಾಗ ಕೊಡಬೇಕು. ಏಕೆಂದರೆ ವರ್ಷ ಪೂರ್ತಿ ದನಗಳಿಗೆ ಹುಲ್ಲು ಹಾಕಬೇಕೆಂದರೆ ನಾವು ಬಣವೆ ಮಾಡಿಕೊಳ್ಳುತ್ತೇವೆ. ಮಲೆ ನಾಡಿನಲ್ಲಿರುವವರಿಗೆ ಮಾತ್ರ ಈ ಸಮಸ್ಯೆ ಗೊತ್ತಾಗುತ್ತದೆ. ವಿನಃ ಸಿಟಿಯಲ್ಲಿ ರುವವರಿಗೆ ಗೊತ್ತಾಗುವುದಿಲ್ಲ. ಸಿಟಿಯಲ್ಲಿ land mafia ಗಳು ನಡೆಯುತ್ತವೆ. ಆದರೆ ಗ್ರಾಮಾಂತರ ಪ್ರದೇಶದಲ್ಲಿ ಆ ರೀತಿ ಯಾವುದೇ ರೀತಿಯಲ್ಲಿ ಮಾಫಿಯಾಗಳು ಇಲ್ಲ. ಹಾಗಾಗಿ ದಯಮಾಡಿ ಅರಣ್ಯ ಎಂದು ಏನಿದೆ ಅದನ್ನು ಕೈಬಿಟ್ಟು, ಈ ಕಾನೂನಿಗೆ ಸರಿಯಾಗಿ ತಿದ್ದುಪಡಿ ಮಾಡಬೇಕು. ಮಾನ್ಯ ಕಂದಾಯ ಮಂತ್ರಿಗಳು ಈ ಬಿಲ್ ಅನ್ನು ಏನು ತಂದಿದ್ದಾರೆ ಅದನ್ನು ತಿದ್ದುಪಡಿಯೊಂದಿಗೆ ಸ್ವಾಗತ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ (ಸಕಲೇಶಪುರ) : ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ ಗ್ರಾಮೀಣ ಪ್ರದೇಶದಲ್ಲಿ ವಾಸ ಮಾಡುತ್ತಿರುವಂತಹ ಬಡ ಜನರಿಗೆ ನಿವೇಶನಗಳನ್ನು ಕೊಡುವುದಕ್ಕೆ ಕಾನೂನು ತಂದಿದೆ, ಅದನ್ನು ಭಾಗಶಃ ಒಪ್ಪಬಹುದಾದರೂ ಇದನ್ನು ಜಾರಿಗೆ ತಂದರೂ ಶೇಕಡ 90 ರಷ್ಟು

ಬಡಜನರು ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ಕಿಮ್ಮನೆ ರತ್ನಾಕರ್‌ರವರು ಬಹಳ ಚೆನ್ನಾಗಿ ಹೇಳಿದ್ದಾರೆ. ರಾಜ್ಯದಲ್ಲಿ ಇರುವಂತಹ 30 ಜಿಲ್ಲೆಗಳಲ್ಲಿ 10–12 ಜಿಲ್ಲೆಗಳಲ್ಲಿ ಮಲೆನಾಡು ಭಾಗದ ಪ್ರದೇಶಗಳು ಇವೆ, ಅಲ್ಲಿ ಒಂದೇ ಒಂದು ಗುಂಟೆ ಜಾಗವನ್ನು ಒಬ್ಬನೇ ಒಬ್ಬ ಬಡವನಿಗೆ ಹಂಚಿಕೆ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ಗೋಪಾಲ್ ಭಂಡಾರಿಯವರು ಮೊನ್ನೆ ಒಂದು ಪ್ರಶ್ನೆ ಕೇಳಿದ್ದಾರೆ. ಅದರಲ್ಲಿರುವ ಕೆಲವು ಅಂಶಗಳನ್ನು ಓದಿಬಿಡುತ್ತೇನೆ. 'ಕಂದಾಯ ಭೂಮಿ ಎಂದು ಯಾವುದೇ ಭೂಮಿ ಇರುವುದಿಲ್ಲ ಕೇವಲ ಸರ್ಕಾರಿ ಭೂಮಿ ಇದ್ದು, ಅದು ರಾಜ್ಯ ಸರ್ಕಾರದ ಸ್ವತ್ತಾಗಿರುತ್ತದೆ. ಸರ್ಕಾರದ ವಶದಲ್ಲಿರುವ ಎಲ್ಲಾ ಭೂಮಿಗಳನ್ನು ಜಿಲ್ಲಾ ಅರಣ್ಯಗಳು ಎಂದು ನೂರು ವರ್ಷಕ್ಕೆ ಹಿಂದೆಯೇ ಸೇರ್ಪಡೆ ಮಾಡಲಾಗಿದೆ. ಮಾನ್ಯ ಸರ್ವೋಚ್ಛ ನ್ಯಾಯಾಲಯವು ರಿಟ್ ಅರ್ಜಿ ಸಂಖ್ಯೆ 2002/95ರಲ್ಲಿ ದಿನಾಂಕ: 12.12.96 ರಂದು ನೀಡಿರುವ ತೀರ್ಪಿನ ನಿರ್ದೇಶನದಂತೆ ಪರಿಭಾಷೆಯಲ್ಲಿ ಪ್ರಸ್ತಾಪಿಸಿರುವಂತೆ ಅರಣ್ಯದ ಲಕ್ಷಣಗಳನ್ನು ಹೊಂದಿರುವಂತಹ ಪ್ರದೇಶಗಳನ್ನು ಗುರುತಿಸಿ ವರದಿಯನ್ನು ಸಿದ್ಧಪಡಿಸಿದ್ದು, ಸರ್ವೋಚ್ಛ ನ್ಯಾಯಾಲಯಕ್ಕೆ ಸಲ್ಲಿಸಿರುತ್ತದೆ. ಅದರಲ್ಲಿ 'ಸಿ' ಮತ್ತು 'ಡಿ' ದರ್ಜೆಯ ಜಮೀನುಗಳೂ ಸಹ ಒಳಗೊಂಡಿರುತ್ತವೆ. ಅರಣ್ಯ ಸಂರಕ್ಷಣಾ ಕಾಯ್ದೆ 80 ನಿಯಮ 2003 ಹಾಗೂ ನ್ಯಾಯಾಲಯ ರಿಟ್ ಅರ್ಜಿ ಸಂಖ್ಯೆ: 2002/95 ಗೋದಾವರ್ಮನ್ ತಿರುಮಲ್ಲಪ್ಪ ವಿರುದ್ಧ Union of India ಹಾಗೂ ಇತರರ ಪ್ರಕರಣದಲ್ಲಿ ನೀಡಿರುವ ವಿವಿಧ ತೀರ್ಪುಗಳ ನುಸಾರ ಒಡೆತನದ ಭೇದಭಾವವಿಲ್ಲದೆ' ದಯಮಾಡಿ ಮುಂದೆ ಗಮನಿಸಬೇಕು. 'ಅರಣ್ಯ ಭೂಮಿಯನ್ನು ಕೇಂದ್ರ ಸರ್ಕಾರದ ಪೂರ್ವಾನುಮತಿಯಲ್ಲಿದೆ, ಅರಣ್ಯೇತರ ಉದ್ದೇಶಗಳಿಗಾಗಿ ಬಿಡುಗಡೆಗೊಳಿಸಲು ಅವಕಾಶವಿರುವುದಿಲ್ಲ. ಇದಲ್ಲದೆ 80ರ ಅರಣ್ಯ ಕಾಯಿದೆಯ ಮಾರ್ಗಸೂಚಿಗಳಂತೆ ಕೃಷಿಗಾಗಿ ಅರಣ್ಯ ಭೂಮಿಯನ್ನು ಬಿಡುಗಡೆಗೊಳಿಸಲು ಅವಕಾಶವಿರುವುದಿಲ್ಲ ಎಂಬ ಅಂಶವನ್ನು ಸಂದರ್ಭಾನುಸಾರ ಸಂಬಂಧಿಸಿದವರ ಗಮನಕ್ಕೆ ತರಲಾಗುತ್ತದೆ.' ಇದೊಂದು sample, ನಮಗೂ ಗೊತ್ತು Forest

ConervationAct, 1980 ಪ್ರಕಾರ Section 2 & 4, ಇವತ್ತು ನಾವು ಆನೆ ಕಾರಿಡಾರ್ ಮಾಡುವುದಕ್ಕೆ ಹೋದಾಗ ಖಾಸಗಿ ಹಿಡುವಳಿಯಲ್ಲಿರುವಂತಹ ಮರಗಳನ್ನು ಕಡಿಯುವುದಕ್ಕೆ ಇವತ್ತು ಕಾನೂನು ತಕರಾರು ಬರುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಕಂದಾಯ ಸಚಿವರಾದಂತಹ ಮಾನ್ಯ ಉಪ ಮುಖ್ಯಮಂತ್ರಿಗಳು ಹೇಳುತ್ತಿದ್ದೀರಿ, ತಮ್ಮ ಜಿಲ್ಲೆಯಿರಬಹುದು, ನಮ್ಮ ಜಿಲ್ಲೆ ಸಕಲೇಶಪುರ ಭಾಗ ಇರಬಹುದು, ಮಂಗಳೂರು, ಉಡುಪಿ ಈ ಭಾಗಗಳಲ್ಲಿ ಎಲ್ಲಿ ಆಗುತ್ತದೆ? ಸಾಧ್ಯವೇ ಇಲ್ಲ, ನೀವು 4,000 ಮನೆಗಳನ್ನು ನಮಗೆ ಕೊಟ್ಟಿದ್ದೀರಿ. ಆದರೆ ನಮಗೆ 200–300 ಮನೆಗಳ ನಿವೇಶನ ಕೊಡುವುದಕ್ಕೆ ಆಗಿಲ್ಲ. ಇನ್ನು 80% ರಿಂದ 90% ನಿವೇಶನ ಇಲ್ಲದೆ ಮನೆಗಳು ಹಾಗೆ ಬಿದ್ದಿವೆ. Practical ಆಗಿ ಅದನ್ನು ಮಾಡುವುದಕ್ಕೆ ಆಗುತ್ತಿಲ್ಲ. ಅದಕ್ಕಾಗಿ ಅವರು ಹೇಳಿದ ಹಾಗೆ ನನ್ನ ಮನವಿ ಏನೆಂದರೆ 'ಅರಣ್ಯ ಭೂಮಿಯಾಗಿದ್ದಲ್ಲಿ' ಎಂಬ ಪದವನ್ನು ತಾವು ಬಿಡಬೇಕು. ಅದು meaningful ಆಗಿ ಇರಲಿ. ಇವತ್ತು ನಮ್ಮ ಸರ್ಕಾರಿ ಭೂಮಿಯನ್ನು ಕಂದಾಯ ಭೂಮಿ 'ಸಿ' ಅಂಡ್ 'ಡಿ' ಎಂದು ಘೋಷಣೆ ಮಾಡಿದ್ದೀರಿ ಹಾಗೂ ಅರಣ್ಯ ಬೆಳೆಸುವುದಕ್ಕೆ ಕೊಟ್ಟಿದ್ದೀರಿ. ಹಾಗಾಗಿ ಇವತ್ತು ಅವನು ಕಾಲು ಹಾಕುವ ಹಾಗೆ ಇಲ್ಲ. ಅರಣ್ಯ ಅಧಿಕಾರಿಗಳು ನಮ್ಮ ತಹಶೀಲ್ದಾರ್‌ಗಳನ್ನು ಕರೆದುಕೊಂಡು ಇರತಕ್ಕಂಥ ಗುಡಿಸಲುಗಳನ್ನೇ ತೆಗೆಸುತ್ತಿದ್ದಾರೆ. ಹೀಗಿದ್ದಾಗ ನಾವು ಖಾಯಂ ಮಾಡತಕ್ಕಂಥ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ? ಇದು ಪರಿಸ್ಥಿತಿ ನಿಜವಾಗಿ ಇರತಕ್ಕಂಥದ್ದು. ವಾಸ್ತವಿಕತೆಯನ್ನು ಅರಿತು, ಇವತ್ತು ಅರಣ್ಯ ಭೂಮಿಯಾಗಿರುವುದನ್ನು ಬಿಟ್ಟು, ಸರ್ಕಾರದಿಂದ ಕೊಟ್ಟಿರತಕ್ಕಂತ 'ಸಿ' ಅಂಡ್ 'ಡಿ' ಪ್ರದೇಶದಲ್ಲಿ ಅರಣ್ಯ ಬೆಳೆದಿದ್ದರೆ, ಅಂಥವುಗಳಿಗೆ ನಾವು ಅವಕಾಶ ಮಾಡತಕ್ಕಂಥ ಕೆಲಸವನ್ನು ಮಾಡೋಣ. ಇದು ಒಂದು. ಎರಡನೆಯದಾಗಿ ಮೂರು ಕಿ.ಮೀ. ವ್ಯಾಪ್ತಿಯೊಳಗಡೆ ಇದ್ದರೆ ಕೊಡಬಾರದು ಎಂದು ಏನಿದೆ, ನಮ್ಮ ಮಲೆನಾಡಿನಲ್ಲಿ ಇವತ್ತು ಟೌನ್‌ಗಳು ಒಂದು ಕಿ.ಮೀ. ಒಳಗಡೆ ಇವೆ. ಯಾವ ಟೌನ್ ಕೂಡ ಮೂರು ಅಥವಾ ಐದು ಕಿ.ಮೀ. ದೂರ ಇಲ್ಲ. ಅಂತಹ ಪ್ರದೇಶಗಳೂ ಕೂಡ ಅಕ್ರಮವಾಗಿ ಏನು ನಿವೇಶನ ಹೊಂದಿದ್ದಾರೆ,

ಅವರಿಗೆ ನಾವು ಕೊಡಬೇಕಾಗುತ್ತದೆ. ಇವತ್ತು ತಾವು 60x40 ಜಾಗ ಎಂದು ಇದೆ, ಅದನ್ನು ಇನ್ನೂ ಜಾಸ್ತಿ ಮಾಡಿ. ನಮ್ಮ ಮಲೆನಾಡಿನಲ್ಲಿ ಒಬ್ಬೊಬ್ಬರು ಎರಡೆರಡು ಎಕರೆ ಜಾಗದಲ್ಲಿ ಮನೆ ಕಟ್ಟಿಕೊಂಡಿದ್ದಾರೆ. ಪಾಪ ಬಡವ 60x40 ಜಾಗದಲ್ಲಿ ಕಟ್ಟಿಕೊಂಡಿರುವುದು ದೊಡ್ಡ ವಿಷಯವಲ್ಲ. ಅದನ್ನು ಇನ್ನೂ ಬೇಕಾದರೆ ಜಾಸ್ತಿ ಮಾಡಿ. ದಯಮಾಡಿ ಈ ಒಂದು ತಿದ್ದುಪಡಿ ಯೊಂದಿಗೆ ಒಪ್ಪಿಗೆ ಕೊಡುವುದಕ್ಕೆ ನಮ್ಮದೂ ಸಹಮತ ಇದೆ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ) : ಮಾನ್ಯ ಅಧ್ಯಕ್ಷರೆ, ನಮ್ಮ ಕಂದಾಯ ಮಂತ್ರಿಗಳು ಬಹಳ ಸೂಕ್ಷ್ಮವಾಗಿ ಈ Bill pass ಮಾಡುವ ದೃಷ್ಟಿಯಿಂದ ಇಲ್ಲಿ ಕೆಲವು ಅಂಶಗಳನ್ನು point out ಮಾಡಿದ್ದಾರೆ. ಈ Bill pass ಆಗಬೇಕಾದರೆ ಅರಣ್ಯ ಭೂಮಿ, ಕಂದಾಯ ಭೂಮಿ ಎಂದು ಗೊಂದಲ ಮಾಡುವುದರಿಂದ ಈ ಬಿಲ್‌ಗೆ ಅಡ್ಡಿಯಾಗುತ್ತದೆ. ಅರಣ್ಯ ಭೂಮಿ ಮತ್ತು ಕಂದಾಯ ಭೂಮಿ ಬೇರ್ಪಡಲೇಬೇಕು. ಆ ಕಾರಣಕ್ಕಾಗಿ ಇವತ್ತು ಬಿಲ್ ಅನ್ನು ತಡೆ ಹಿಡಿದುಕೊಂಡರೆ ಬಡವರಿಗೆ ಮನೆ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ಅನೇಕ ತಾಲ್ಲೂಕು ಕ್ಷೇತ್ರಗಳಲ್ಲಿ ಮನೆಗಳನ್ನು ಕೊಡುವುದಕ್ಕೆ ಆಗಿಯೇ ಇಲ್ಲ, ಹಾಗೇ ಉಳಿದುಕೊಂಡಿದೆ. ಆದುದರಿಂದ ಈಗ ಏನು ಒಂದು point out ಮಾಡಿದ್ದಾರೆ, ಅದು ಹಾಗೇ ಉಳಿದು ಕೊಂಡರೆ ಒಳ್ಳೆಯದು. ಇಲ್ಲದಿದ್ದರೆ ಇದೇ ಒಂದು ನೆಪವಾಗಿ ಬಿಲ್ ಪಾಸ್ ಆಗದಿದ್ದರೆ ಇದರಿಂದ ಲಕ್ಷಾಂತರ ಜನರಿಗೆ ತೊಂದರೆಯಾಗುತ್ತದೆ. ಮಾನ್ಯ ವಿರೋಧ ಪಕ್ಷದ ಅನೇಕ ಮಿತ್ರರು 20x30 ಜಾಗ ಕೊಡಿ ಎಂದು ಹೇಳಿದರು. ನಮಗೆ ನಿಮಗೆ 80x40, 50x80 ಜಾಗಬೇಕು. ಆದರೆ ಕೂಲಿ ಮಾಡುವವರಿಗೆ 30x40 ಜಾಗ ಸಾಕು ಎಂದು ಹೇಳಿ ಅವರ ಮಟ್ಟವನ್ನು ಈ ರೀತಿ ಅಳೆಯಬಾರದು. ನೀವು ಎಷ್ಟು ಅಗಲದ ಜಾಗದಲ್ಲಿ ವಾಸ ಮಾಡುತ್ತೀರೋ ಅಷ್ಟೇ ಜಾಗದಲ್ಲಿ ಹಳ್ಳಿಯಲ್ಲಿ ಕೂಲಿ ಮಾಡುವ ಜನ ವಾಸ ಮಾಡಿದರೆ ತಪ್ಪೇನು ಎನ್ನುವುದು ನನ್ನ ಅಭಿಪ್ರಾಯ. ಬಡವರ ಬಗ್ಗೆ ಏಕಿಷ್ಟು ತಾತ್ಸಾರದ ಮಾತು? ದಯಮಾಡಿ ಈ ರೀತಿ ತಾರತಮ್ಯ ಮಾಡಬಾರದು. ನಗರ

ಜೀವನಕ್ಕೆ ಹೋಲಿಕೆ ಮಾಡಿ ಗ್ರಾಮಾಂತರ ಜನರ ಜೀವನವನ್ನು Underestimate ಮಾಡುವುದು ಬೇಕಾಗಿಲ್ಲ. ಅವರ ಬಗ್ಗೆ ಎಷ್ಟು ಅನಾದರಣೆ ಭಾವನೆ ಇದೆ ಎನ್ನುವುದು ವ್ಯಕ್ತವಾಗಿತ್ತದೆ. ಆ ರೀತಿ ತಪ್ಪಾಗಿ ಭಾವಿಸಬಾರದು. ಪರಿಶಿಷ್ಟ ಜಾತಿ ಮತ್ತು ಹಿಂದುಳಿದ ವರ್ಗದವರು 20x30 ಅಗಲ ಜಾಗದಲ್ಲಿ ವಾಸ ಮಾಡಬೇಕೆನ್ನುವುದು ಯಾವ ನ್ಯಾಯ? ಇದು ಒಂದು ಕಣ್ಣಿಗೆ ಸುಣ್ಣ, ಇನ್ನೊಂದು ಕಣ್ಣಿಗೆ ಬೆಣ್ಣೆ ಮಾಡಿದಂತೆ ಆಗುತ್ತದೆ. ದಯವಿಟ್ಟು ಆ ರೀತಿ ಮಾಡಬಾರದು. ನೀವು ಒಂದು ಎಕರೆ ಕೊಟ್ಟರೂ ಪರವಾಗಿಲ್ಲ. ಅದು ಗ್ರಾಮಾಂತರ, ಅಲ್ಲಿ ಏನು ಹತ್ತು ಸಾವಿರ ರೂಪಾಯಿ ಕೇಳುವುದಿಲ್ಲ. ಅಲ್ಲೇ ಕೊಟ್ಟಿಗೆ ಎಲ್ಲಾ ಇರುತ್ತದೆ. ನಮ್ಮ ಮಾನ್ಯ ಕುಮಾರಸ್ವಾಮಿಯವರು ಹೇಳಿದಂತೆ ಪುರಸಭೆ ಎಂದರೆ ಮೂಡಿಗೆರೆಯಲ್ಲಿ ಎರಡು ಕಿ.ಮೀಟರ್‌ಗೆ ಇನ್ನೊಂದು ಪಂಚಾಯತಿ ಬರುತ್ತದೆ. ಒಂದೇ ಕಿ.ಮೀಟರ್‌ಗೆ ಇನ್ನೊಂದು ಪಂಚಾಯತಿ ಪ್ರಾರಂಭವಾಗುತ್ತದೆ. ನಮ್ಮ ಮಾನ್ಯ ಕಂದಾಯ ಮಂತ್ರಿಗಳು ಈ ಬಿಲ್ ಪಾಸ್ ಆಗುವ ದೃಷ್ಟಿಯಿಂದ ಬಹಳ ಸೂಕ್ಷ್ಮವಾಗಿ ಅವಲೋಕನ ಮಾಡಿ ತಂದಿದ್ದಾರೆ. ಇದು ಸರಿಯಾಗಿಯೇ ಇದೆ. ಮತ್ತೆ ನಾವು ಕಂದಾಯ ಭೂಮಿ ಮತ್ತು ಅರಣ್ಯ ಭೂಮಿ ಎಂದು bifurcate ಮಾಡೋಣ. ಆ ಕಾರಣಕ್ಕಾಗಿ ಈ ಪದವನ್ನು ತೆಗೆದು ಆ ಬಿಲ್ ಹಿಂದಕ್ಕೆ ಪಡೆಯುವಂತಹ ವಾತಾವರಣ ನಿರ್ಮಾಣವಾಗುವುದು ಬೇಡ. ದಯಮಾಡಿ ಲಕ್ಷಾಂತರ, ಕೋಟ್ಯಾಂತರ ಜನ ನಮ್ಮ ಸರ್ಕಾರ, ನಮ್ಮ ಎಂಎಲ್ಎ, ನಮ್ಮ ಮಂತ್ರಿಗಳು ಮನೆ ಕೊಡುತ್ತಾರೆಂದು ಕಾಯುತ್ತಿದ್ದಾರೆ. ಇದಕ್ಕೆ ದಯವಿಟ್ಟು ಸಹಕರಿಸಬೇಕು. ಈ ರೀತಿ ಮಾಡುವುದು ಒಳ್ಳೆಯದೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಗೂಳಿಹಟ್ಟಿ ಡಿ. ಶೇಖರ್ (ಹೊಸದುರ್ಗ) : ಮಾನ್ಯ ಅಧ್ಯಕ್ಷರೆ 'ಸಿ' ಅಂಡ್ 'ಡಿ' ಲ್ಯಾಂಡ್‌ನಲ್ಲಿ ಸುಮಾರು 1992 ಮತ್ತು 1995ನೇ ಇಸವಿಯಲ್ಲಿ ರಾಜ್ಯದಲ್ಲಿ ಲಕ್ಷಾಂತರ ಹೆಕ್ಟೇರ್ ಪ್ರದೇಶವನ್ನು ಕಂದಾಯ ಇಲಾಖೆಯಿಂದ ಅರಣ್ಯ ಇಲಾಖೆಗೆ, ಆಗ ಬರಡು ಖಾಲಿ ಭೂಮಿಯನ್ನು ಗಿಡಗಳನ್ನು ನೆಡುವುದಕ್ಕೆ ಮಾತ್ರ ವರ್ಗಾವಣೆ ಮಾಡಿತ್ತು. 1992 ಮತ್ತು 1995ರಲ್ಲಿ

ವರ್ಗಾವಣೆ ಮಾಡುವಂತಹ ಸಂದರ್ಭದಲ್ಲಿ ಕಂದಾಯ ಇಲಾಖೆ ಒಂದು ಆದೇಶದಲ್ಲಿ ಸ್ಪಷ್ಟವಾಗಿ ಹೇಳಿದೆ. ಈ ಭೂಮಿ ಸರ್ಕಾರದ ಉದ್ದೇಶಕ್ಕೆ ಕಂದಾಯ ಇಲಾಖೆಗೆ ಯಾವಾಗ ಬೇಕೋ ಆಗ ವರ್ಗಾಯಿಸಿರತಕ್ಕಂಥ ಜಮೀನನ್ನು ವಾಪಸ್ಸು ಪಡೆಯಬಹುದು ಎಂದು ಸ್ಪಷ್ಟವಾಗಿ ಆದೇಶ ಇದೆ. ಅದರಲ್ಲಿ reserve forest ಎಂದು ನಮೂದಿಸಬಾರದು ಎಂದು ಸುಮಾರು conditions ಅನ್ನು ಕಂದಾಯ ಇಲಾಖೆಯವರು ಹಾಕಿದ್ದಾರೆ. ಆದರೆ ಇತ್ತೀಚೆಗೆ ಅದನ್ನೇ ಆಧಾರವಾಗಿ ಇಟ್ಟುಕೊಂಡು, ಇವತ್ತು ತೊಂದರೆ ಇರುವುದು ಕೂಡ 'ಸಿ' ಅಂಡ್ 'ಡಿ' ಲ್ಯಾಂಡ್‌ನಲ್ಲಿದೆ. ರೈತರಿಗಾಗಲಿ, ಬಡವರಿಗಾಗಲಿ ಪ್ರತಿಯೊಂದು ಈ 'ಸಿ' ಅಂಡ್ 'ಡಿ' ಲ್ಯಾಂಡ್‌ನಿಂದ ತೊಂದರೆಯಾಗುತ್ತಿರುವುದು. ಅದು ಮೂಲತಃ reserve forest ಅಲ್ಲ, Section 4, Section 2 ಯಾವುದು ಆಗಿರುವುದಿಲ್ಲ. ಅಂತಹ ಕಂದಾಯ ಜಮೀನುಗಳೇನಿವೆ, ಅವುಗಳನ್ನು ನಮ್ಮ ಉಪ ಮುಖ್ಯಮಂತ್ರಿಗಳು ಮನಸ್ಸು ಮಾಡಿ ವಾಪಸ್ಸು ಪಡೆದುಕೊಂಡರೆ ಅದರಿಂದ ರೈತರಿಗೆ ಮತ್ತು ಬಡವರಿಗೆ ಅನುಕೂಲವಾಗುತ್ತದೆ. 60x40 ಜಾಗವನ್ನು ಏನು ಕೊಡುತ್ತೀರಿ, ಅದರಿಂದ ಗ್ರಾಮಾಂತರ ಪ್ರದೇಶದಲ್ಲಿ ಒಳ್ಳೆಯದಾಗುತ್ತದೆ. ಅರಣ್ಯ ಪ್ರದೇಶದಲ್ಲಿ ಏನು ಮನೆ ಕಟ್ಟಿಕೊಂಡಿದ್ದಾರೆ, ಅಂತಹ 'ಸಿ' ಅಂಡ್ 'ಡಿ' ಲ್ಯಾಂಡ್ ವಾಪಸ್ಸು ತೆಗೆದುಕೊಳ್ಳುವುದು ಒಂದು ಉದ್ದೇಶವಾದರೆ, ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದಾಗಲಿ, wind-mill ಗಳಿಗಾಗಲಿ ಸೆಕ್ಷನ್-4 ಅಥವಾ State reserve forest ಇದ್ದರೂ ಕೂಡ ಒಂದು, ಎರಡು ಅಥವಾ ಮೂರು ತಿಂಗಳೊಳಗೆ reserve forest ನಲ್ಲಿ NPV ಕಟ್ಟಿಸಿಕೊಂಡು ಅರಣ್ಯ ಇಲಾಖೆಯಿಂದ NOC ಕೊಡುತ್ತಾರೆ.

ಶ್ರೀ ಡಿ.ಎನ್. ಜೀವರಾಜ್ : ಮಾನ್ಯ ಅಧ್ಯಕ್ಷರೆ, ಅವರು forest ನಿಂದ ಜಾಗವನ್ನು ವಾಪಸ್ಸು ತೆಗೆದುಕೊಳ್ಳಬೇಕು, ಇಲ್ಲದಿದ್ದರೆ ಮನೆಗಳನ್ನು ಕಟ್ಟುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಿದ್ದಾರೆ. ಮಾನ್ಯ ಸದಸ್ಯರ ಕಳಕಳಿ ಬಹಳ ಚೆನ್ನಾಗಿದೆ. ರಾಜ್ಯದಲ್ಲಿ 1998ನೇ ಇಸವಿಯಲ್ಲಿ 26 volume ಮಾಡಿ

ಡೀಮ್ಡ್ ಫಾರೆಸ್ಟ್‌ಗಳು ಇಂತಿಂಥದ್ದನ್ನು ಬಿಡಿಸಬೇಕು, ಇದನ್ನು ಬಿಡಿಸುವುದಕ್ಕೆ ಕರ್ನಾಟಕ ಸಿದ್ಧವಿದೆಯೆಂದು ಸುಪ್ರೀಂ ಕೋರ್ಟ್ ಮುಂದೆ ಇಟ್ಟು ಬಂದಿದ್ದಾರೆ. 2002ರಲ್ಲಿ ಮತ್ತೆ Chief Secretary ಯವರು ಕರ್ನಾಟಕದಲ್ಲಿ ಇದನ್ನು ಬಿಡಿಸುತ್ತೇವೆಂದು affidavit ಹಾಕಿಕೊಂಡಿದ್ದಾರೆ. ಪಕ್ಕದ ರಾಜ್ಯಗಳು ಬಿಡುವುದಕ್ಕೆ ಆಗುವುದಿಲ್ಲವೆಂದು ಹೇಳಿವೆ. ಇದನ್ನು ಕರ್ನಾಟಕ ರಾಜ್ಯ ಮಾತ್ರ ಹೇಳಿದ್ದು. ಅವತ್ತು ಇದನ್ನು ಹೇಳಿರುವಂಥದ್ದು ತಪ್ಪಾಗಿದೆ, ಅದನ್ನು ಇವತ್ತು ಬದಲಾಯಿಸಿಕೊಳ್ಳಬೇಕೆನ್ನುವಂಥದ್ದು ಅವರ ಅಭಿಪ್ರಾಯವಾಗಿರುವುದರಿಂದ, ಇದು ಮಲೆನಾಡಿನವರ ಎಲ್ಲರ ಅಭಿಪ್ರಾಯವೂ ಆಗಿದೆ. ಇದು 1998 ಮತ್ತು 2002ರಲ್ಲಿ ಏನು ಹೇಳಿದ್ದಾರೆ, ಆ 26 volume ಗಳು ಏನು ಇವೆ, ಅದನ್ನೇ withdraw ಮಾಡಬೇಕೆಂಬುದು ಮೂಲ ವಿಷಯವಾಗಿದೆ.

(ಗೊಂದಲ)

ಶ್ರೀ ಗೂಳಿಹಟ್ಟಿ ಡಿ.ಶೇಖರ್ : ಮಾನ್ಯ ಅಧ್ಯಕ್ಷರೆ, ಅದರಲ್ಲೇ ಅವಕಾಶ ಇದೆಯಲ್ಲಾ ಅದರಲ್ಲೇ ಮಾಡಬೇಕು ಅಥವಾ NPV ಕಟ್ಟಿದರೆ ಅವಕಾಶ ಕೊಡುತ್ತಾರಲ್ಲ, windmillಗಳಿಗೆ ಅವಕಾಶವನ್ನು ಕೊಡುತ್ತಾರೆ. ಆದರೆ reserve forest ಗಳಲ್ಲಿ 2 ತಿಂಗಳು, 3 ತಿಂಗಳುಗಳಿಗೆ NOC ಕೊಡುತ್ತಾರೆ. ಬಡವರಿಗೆ ಮನೆಗಳನ್ನು ಕಟ್ಟಿಕೊಳ್ಳುವಂಥದ್ದಕ್ಕೆ ಸೂಕ್ತವಾದಂಥ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ತಿಳಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ. ರಘುಪತಿ ಭಟ್ (ಉಡುಪಿ) : ಮಾನ್ಯ ಅಧ್ಯಕ್ಷರೆ, 94(ಸಿ) ಗೆ ತಿದ್ದುಪಡಿ ತಂದಿರುವಂಥದ್ದಕ್ಕೆ ಸ್ವಾಗತಾರ್ಹ. ಆದರೆ ಇದರಲ್ಲಿ ಕೆಲವರು confusion ಇದ್ದ ಹಾಗೆ ಕಾಣುತ್ತಿದೆ. ಮಾನ್ಯ ರಾಜ್ಯಪಾಲರು ಇದನ್ನು ಏಕೆ ವಾಪಸ್ಸು ಕಳುಹಿಸಿದರೆಂಬುದರ ಬಗ್ಗೆ ಒಂದು ರೀತಿಯ ಸಂಶಯವಿದೆ. ಏಕೆಂದರೆ, ಈಗ ನಾವು ಯಾವುದೇ ಜಾಗವನ್ನು ಮಂಜೂರು ಮಾಡುವುದಲ್ಲ. 30x40, 60x40, ಜಾಗವನ್ನು ಮಂಜೂರು ಮಾಡುತ್ತಿರುವಂಥದ್ದಲ್ಲ. ಈ ಕಾನೂನು ಹಿಂದೆ ಯಾರು ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡು

ಕುಳಿತುಕೊಂಡಿದ್ದಾರೆ, ಅಲ್ಲಿ ವಾಸಿಸುತ್ತಿದ್ದಾರೆ, ಅವರಿಗೆ ಸಕ್ರಮ ಮಾಡಿ ಕೊಡುವಂಥದ್ದು. ಯಾವುದೇ ಸರ್ಕಾರ, ಯಾವುದೇ ಅಧಿಕಾರಿ ಬಂದರೂ ಸಹಿತ ಅವರನ್ನು ಎಬ್ಬಿಸುವುದಕ್ಕೆ ನಮಗೆ ಯಾರಿಗೂ ಸಾಧ್ಯವಿಲ್ಲ. ಏಕೆಂದರೆ, ಈಗಾಗಲೇ ಅವರು ಬಡವರಾಗಿದ್ದಾರೆ. ಇನ್ನೊಂದು ವಿಚಾರವೇನೆಂದರೆ, ನಮ್ಮ ಕರಾವಳಿ ಭಾಗದಲ್ಲಿ, ಮಲೆನಾಡು ಭಾಗಗಳಲ್ಲಿ ಬಂದು ನೋಡಬೇಕು. 94(ಸಿ) ಹಕ್ಕು ಪತ್ರವಾಗುವುದಕ್ಕೆ ಅರ್ಹರಾಗಿರುವವರು ಯಾವ ರೀತಿ ವಾಸಿಸುತ್ತಿದ್ದಾರೆಂಬುದನ್ನು ನೋಡಬೇಕು. ಇವರು ಕರೆಂಟ್ ಇಲ್ಲದೆ, ನೀರು ಇಲ್ಲದೇ, ಇದ್ದಾರೆ. ಆದರೂ ಸ್ವಲ್ಪ ಜಾಗವಿದ್ದರೆ ಅಂಥ ಜಾಗದಲ್ಲಿ ಅಂಥ ಮನೆಗಳಲ್ಲಿ ವಾಸ ಮಾಡುವುದಕ್ಕೆ ಸಾಧ್ಯವಿಲ್ಲ. ಅವರ ಪರಿಸ್ಥಿತಿ ಅಷ್ಟು ಹಾಳಾಗಿದೆ, ಇಷ್ಟು ಹಾಳಾಗಿದ್ದರೂ ಆ ಮನೆಗಳನ್ನು ಅಕ್ರಮವಾಗಿ ಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಹಾಗಾಗಿ ಅವರಿಗೆ ಸರ್ಕಾರದ ಯಾವುದೋ ಒಂದು ಭೂಮಿಯನ್ನು ತೆಗೆದು ಅವರಿಗೆ ಕೊಡುವುದಲ್ಲ. ಅವರು already ಬಡವರಾಗಿ ನೆಲೆ ಇಲ್ಲದೇ ಇರುವುದಕ್ಕೆ ಸರ್ಕಾರಿ ಜಾಗದಲ್ಲಿ ಹಿಂದೆ ಯಾರೋ ಇಲ್ಲಿ ಕುಳಿತುಕೋ, ಅಲ್ಲಿ ಕುಳಿತುಕೋ ಎಂದು ಹೇಳಿರುತ್ತಾರೆ, ಹಾಗಾಗಿ ಅವರು ಅಲ್ಲಿ ವಾಸಿಸುತ್ತಿದ್ದಾರೆ. ಅವರಿಗೆ ಮನೆಯನ್ನು ಕಟ್ಟಿಕೊಳ್ಳು ವುದಕ್ಕೆ ಹಕ್ಕುಪತ್ರ ಸಿಗುತ್ತಿಲ್ಲ, ಅವರಿಗೆ ಒಂದು door number ಸಿಗುತ್ತಿಲ್ಲ, ಅವರಿಗೆ ನೀರು connection ಸಿಗುತ್ತಿಲ್ಲ, ಕರೆಂಟ್ ಹಾಕಿ ಕೇಳುವುದಕ್ಕೆ ಆಗುವುದಿಲ್ಲ. ಹಾಗಾಗಿ ನಮ್ಮ ಜಿಲ್ಲೆಯ ಅಂಕಿ-ಅಂಶಗಳನ್ನು ನೋಡಿದರೆ, ಇವರು ಸುಮಾರು 12,000 ಜನರಿದ್ದಾರೆ. ಇವರು ಅರ್ಹರಾಗಿರುವವರು, ಇವರು ಫಾರೆಸ್ಟ್‌ನಲ್ಲಿದ್ದವರು, road margin ನಲ್ಲಿದ್ದವರು, ಇವರನ್ನೆಲ್ಲಾ ಬಿಟ್ಟು, ಅರ್ಹರಾಗಿರುವವರು 12,000 ಜನರಿದ್ದಾರೆ. ಇವರಿಗೆ ಉಪಕಾರವಾದ ಹಾಗೆ ಆಗುತ್ತದೆ, ಹಾಗಾಗಿ ಇದು ಒಳ್ಳೆಯ ಕಾನೂನನ್ನು ಜಾರಿಗೆ ತಂದಿದ್ದಾರೆ, ಇದನ್ನು ಜಾರಿಗೆ ತರಬೇಕು. ಮಾನ್ಯ ಗೋಪಾಲ ಭಂಡಾರಿಯವರು ಹೇಳಿದ ಹಾಗೆ ಕೆಲವು ತಿದ್ದುಪಡಿಯನ್ನು ಮಾನ್ಯ ಕಂದಾಯ ಸಚಿವರು ದಯವಿಟ್ಟು ಮಾಡಬೇಕು. ಅವರ ಗಮನಕ್ಕೆ ಬಂದು ಮಾಡಿದ್ದಾರೋ, ಇಲ್ಲವೋ, ನನಗೆ

ಗೊತ್ತಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರೆ, ದಯವಿಟ್ಟು ಪುರಸಭೆ ಮತ್ತು ಗ್ರಾಮ ಪಂಚಾಯತ್ ಹೊರ ವರ್ತುಲದಿಂದ 3 ಕಿ.ಮೀ. ಮಿತಿ ಮತ್ತು ನಗರಸಭೆಯಿಂದ 5 ಕಿ.ಮೀ. ಮಿತಿ, ಇದನ್ನು ದಯವಿಟ್ಟು ತಾವು ತೆಗೆಯ ಬೇಕು. ನಗರಕ್ಕೆ ಕೊಡಬೇಕೆನ್ನುವ ವಾದವನ್ನು ಕಳೆದ ಸಾರಿ ಮಾಡಿರುತ್ತೇವೆ. ತಾವು ಕಿ.ಮೀ. ಎಂದು ಮಾಡುವ ಆವಶ್ಯಕತೆ ಇಲ್ಲ, ಮತ್ತೆ ಗ್ರಾಮ ಪಂಚಾಯತ್‌ನಿಂದ 3 ಕಿ.ಮೀ. ಎಂದು ಮಾಡಿದರೆ, ತಾವು ಬಹಳ ದೊಡ್ಡ ಉದ್ದೇಶವನ್ನಿಟ್ಟುಕೊಂಡು ಈ ಕಾನೂನನ್ನು ತರುತ್ತಿದ್ದೀರಿ. ಇದರಿಂದ ಗ್ರಾಮಾಂತರ ಪ್ರದೇಶದಲ್ಲಿ ಯಾರಿಗೂ ಕೊಡುವುದಕ್ಕೆ ಆಗುವುದಿಲ್ಲ. ತಮ್ಮ ಉದ್ದೇಶ ಒಳ್ಳೆಯದಿದೆ, ಆದರೆ ವಾಸ್ತವಿಕವಾಗಿ ಅಲ್ಲಿ ಕೊಡುವುದಕ್ಕೆ ಆಗುವುದಿಲ್ಲ. ದಯವಿಟ್ಟು ಈ ಪುರಸಭೆ, ಗ್ರಾಮ ಪಂಚಾಯತ್ ಹೊರ ವರ್ತುಲ 3 ಕಿ.ಮೀ. ವ್ಯಾಪ್ತಿಯನ್ನು ತೆಗೆಯಬೇಕು, ಇಲ್ಲವೆಂದರೆ, ತಾವು ತಂದಿರುವ ಉದ್ದೇಶ ಪೂರೈಸುವುದಿಲ್ಲವೆಂಬುದು ನನ್ನ ವಿನಂತಿ. ಎರಡನೆ ಯದಾಗಿ, ಅರಣ್ಯ ಮತ್ತು ಪರಿಸರದಲ್ಲಿ ಇದೆ, ಪರಿಸರ ಮತ್ತು ಅರಣ್ಯ ನಿಯಂತ್ರಣದಲ್ಲಿ ಇದೆಯೇ? ಕರಾವಳಿ ನಿಯಂತ್ರಣದಿಂದ ಅವಿರತವಾಗಿ ಪ್ರದೇಶದಲ್ಲಿ ಎಂದು ಬಂದಿದೆ. ತಾವು ದಯವಿಟ್ಟು ಕೇಂದ್ರ ಕಾನೂನು ಪ್ರಕಾರ ಅದನ್ನು ಹಾಕಬೇಕಾಗುತ್ತದೆ. ನನ್ನ ಒಂದು ಸಲಹೆ ಏನೆಂದರೆ, 1991ನೇ ಇಸವಿಯಲ್ಲಿ ಕೇಂದ್ರದ CRZ ಕಾಯಿದೆ ಬಂದಿದೆ. ಇದರಲ್ಲಿ ಒಂದನ್ನು ಸೇರಿಸಬೇಕು, 1991ನೇ ಇಸವಿಯ ನಂತರ ಅವಕಾಶ ಬೇಡ, 1991ನೇ ಇಸವಿಗಿಂತ ಮೊದಲು ಸಮುದ್ರ ದಂಡೆಯಲ್ಲಿ ಬಹಳಷ್ಟು ಜನರು ಮನೆಯನ್ನು ಕಟ್ಟಿಕೊಂಡು ಕುಳಿತ್ತಿದ್ದಾರೆ. ಅವರು CRZ ವ್ಯಾಪ್ತಿಗೆ ಬರುವುದಿಲ್ಲ, ಇದನ್ನು CRZ ಕಾನೂನಿನಲ್ಲೇ ಹೇಳಿದ್ದಾರೆ. 1991ನೇ ಇಸವಿಗಿಂತ ಮೊದಲು ಯಾವ ಮನೆಗಳು ಇವೆ. ಅದನ್ನು ಸಕ್ರಮ ಮಾಡಬಹುದೆಂಬುದನ್ನು 1991 CRZ ಕಾಯಿದೆಯಲ್ಲೇ ಹೇಳಿದ್ದಾರೆ. ಇದರಲ್ಲಿ ಒಂದನ್ನು ಸೇರಿಸಿದರೆ, CRZ ಕಾಯಿದೆ ಪ್ರಕಾರ 1991ರ ಮೊದಲು ಯಾವ ಮನೆಗಳು ಇವೆ, ಅವುಗಳನ್ನು ಸಕ್ರಮ ಮಾಡಬಹುದೆಂದರೆ, ನಮ್ಮ

ಕರಾವಳಿ ಭಾಗದಲ್ಲಿ ತುಂಬಾ ಜನರಿಗೆ 94(ಸಿ)ಯಲ್ಲಿ ಮಾಡುವುದಕ್ಕೆ ಆಗುತ್ತದೆ. ಮಾನ್ಯ ಎಸ್.ಎಂ.ಕೃಷ್ಣರವರ ಕಾಲದಲ್ಲಿ 94(ಸಿ)ಯನ್ನು ಜಾರಿಗೆ ತಂದಂಥ ಸಂದರ್ಭದಲ್ಲಿ ಬಹಳಷ್ಟು ಜನರಿಗೆ ಆಗಿದೆ. ಆದರೆ CRZ ನವರಿಗೆ ಆಗಿಲ್ಲ, ಏಕೆಂದರೆ, ಅದು ಒಂದು ತೊಂದರೆ ಇತ್ತು. ಈಗ 1991ನೇ ಇಸವಿಗಿಂತ ಮೊದಲು ಇರುವವರನ್ನು CRZ ವ್ಯಾಪ್ತಿಯಲ್ಲಿ ಮಾಡಬಹುದೆಂದು, ತಿದ್ದುಪಡಿಯನ್ನು ತಂದರೆ ಬಹಳಷ್ಟು ಜನರಿಗೆ ಉಪಯೋಗವಾಗುತ್ತದೆ. ಮತ್ತೆ ನನ್ನ ವಿನಂತಿ ಏನೆಂದರೆ, ಕಿ.ಮೀ. ಮಿತಿಯನ್ನು ಪುರಸಭೆ ಅಗಲಿ, ಗ್ರಾಮ ಪಂಚಾಯತಿ ಆಗಲಿ, ನಗರಸಭೆ ಆಗಲಿ, ಇದರಿಂದ ತೆಗೆಯಬೇಕು, ಮತ್ತೆ ವಿಶೇಷವಾಗಿ ತಾವು ಮತ್ತೊಂದು ಕಾನೂನು ತರುತ್ತೀರೆಂದು ನಾನು ಭಾವಿಸಿದ್ದೇನೆ. ನಗರ ಪ್ರದೇಶಕ್ಕೂ 30x40 ಮಾಡಿ ತರಬೇಕು. ಇನ್ನೊಂದು ವಿಚಾರವೇನೆಂದರೆ, ನಮ್ಮ ಎಲ್ಲಾ ಶಾಸಕರು ಹೇಳಿದ ಹಾಗೆ ಡೀಮ್ಡ್ ಫಾರೆಸ್ಟ್ ಬಗ್ಗೆ, ಈ ಫಾರಸ್ಟ್‌ನದ್ದು ಬಹಳ ಸಮಸ್ಯೆ ಇದೆ. ನಮ್ಮಲ್ಲಿ ಬಹಳ ದೊಡ್ಡ ಸಮಸ್ಯೆ ಎಂದರೆ ಹಿಂದೆ ಪಂಚಾಯತಿ ಕಾಡು ಎಂದು ಬರೆದಿಟ್ಟಿದ್ದಾರೆ. ಅಲ್ಲಿ ಈಗಾಗಲೇ 100, 200 ಜನರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ನಾವು ರೆವಿನ್ಯೂರವರು ಅರಣ್ಯ ಇಲಾಖೆಯವರ ಹತ್ತಿರ NOC ಕೇಳುವುದು, ಅರಣ್ಯದವರು ನಮ್ಮ ಪಟ್ಟಿಯಲ್ಲಿ ಇಲ್ಲವೆಂದು ಹೇಳುತ್ತಾರೆ. ಅಲ್ಲಿ ಅರಣ್ಯ ಭೂಮಿ ಎನ್ನುವುದು ಬಿಟ್ಟು ಒಂದು ಗಿಡವಿಲ್ಲ. ಅಲ್ಲಿ totally ಮನೆಗಳು ಇವೆ, ಆದರೆ ಅದು ಪಂಚಾಯತಿ ಕಾಡು ಎಂದು ಹಕ್ಕುಪತ್ರವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ, reserve forest, social forest, ಇಲ್ಲಿ ಕಟ್ಟಿದವರಿಗೆ ಕೊಡುವುದು ಬೇಡ, road marginನಲ್ಲೂ ಬೇಡ. ಆದರೆ ಸುಮ್ಮನೆ ಕಾಡು ಎಂದು ಹೇಳಿದ ಕೂಡಲೇ ನ್ಯಾಯಯುತವಾಗಿ ಕೊಡದೇ ಇದ್ದರೆ ಎಷ್ಟೋ ಜನರು ಪಂಚಾಯತಿ ಕಾಡು ಎಂದು ಹಿಂದೆ ಯಾರೋ ಬರೆದು ತಪ್ಪಾಗಿ ಇವತ್ತು 25–30 ವರ್ಷಗಳಿಂದಲೂ ಮನೆಯನ್ನು ಕಟ್ಟಿಕೊಂಡಿದ್ದಾರೆ. 2001ರಲ್ಲಿ, 1998ರಲ್ಲಿ 94(ಸಿ) ಬಂದಾಗಲೂ ಅವನಿಗೆ

ಹಕ್ಕುಪತ್ರವನ್ನು ಮಾಡಿಕೊಳ್ಳುವುದಕ್ಕೆ ಆಗಲಿಲ್ಲ. ಅಂಥಾದಕ್ಕೂ ಪಂಚಾಯತಿ ಕಾಡು, ಇತರ ಕಾಡುಗಳಿಗೆ, ಒಂದು ಸೇರಿಸಿ, Social forest ಮತ್ತು reserve forest ನಲ್ಲಿ ಇದ್ದರೆ ಮಾಡಬಾರದೆಂದು ಸೇರಿಸಿ, ಅದಕ್ಕೆ ತೊಂದರೆ ಇಲ್ಲ. ಅರಣ್ಯ ಎಂದು ಬಂದರೆ, ಅರಣ್ಯ ಎಂದರೆ ಎಲ್ಲರೂ ನಮ್ಮದೆ ಎಂದು ಹೇಳುತ್ತಾರೆ, ಅಜ್ಜರ ಕಾಡು ಎಂದು ಊರಿನ ಹೆಸರು ಬಂದರೆ, ಕಾಡು ನಾವು ಕೊಡುವುದಿಲ್ಲವೆಂದು ಹೇಳುತ್ತಾರೆ. ಅಲ್ಲಿ ಎಷ್ಟು ಮನೆಗಳು ಇದ್ದರೂ ಕೊಡುವುದಿಲ್ಲವೆಂದು ಹೇಳುತ್ತಾರೆ. ಹಾಗಾಗಿ 94(ಸಿ)ಯನ್ನು ತಿದ್ದುಪಡಿ ಮಾಡುವಾಗ ಕೆಲವು ತಿದ್ದುಪಡಿಯೊಂದಿಗೆ ಅಂಗೀಕಾರ ಮಾಡಬೇಕು, ಇಲ್ಲವೆಂದರೆ ಮಾನ್ಯ ರಾಜ್ಯಪಾಲರು ಮತ್ತೊಂದು ಏನಾದರೂ ಹುಡುಕಿ ವಾಪಸ್ಸು ಕಳುಹಿಸುವಂಥ chance ಇದೆ. ಪುರಸಭೆ ಮತ್ತು ಗ್ರಾಮ ಪಂಚಾಯತಿ, ನಗರಸಭೆಯಿಂದ ಇಷ್ಟು ಕಿ.ಮೀ. ಎಂಬುದನ್ನು ತೆಗೆಯಬೇಕು, ಎರಡನೆಯದಾಗಿ, ಅರಣ್ಯ ಎಂದರೆ reserve forest, reserve forest book, divisional forest note book, divisional forest reference map, state forest ಇದು ಬಿಟ್ಟರೆ, ಬೇರೆಯದು ಯಾವುದೂ forest ಎಂದು ಬರುವುದಿಲ್ಲ. ಆದರೆ ಪಂಚಾಯತಿ ಕಾಡು ಎಂದು ಯಾರೋ ಹಿಂದಿನ ಅಧಿಕಾರಿಗಳು ಬರೆದು ಇಟ್ಟರು. ಇವರು ಕಾಡು ಎಂದು ಕೊಡುತ್ತಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಯವರು ಒಳ್ಳೆಯ ಕಾನೂನನ್ನು ಮತ್ತೊಮ್ಮೆ ತರುತ್ತಿದ್ದೀರಿ. ದಯವಿಟ್ಟು 94(ಸಿ)ಯನ್ನು ತಿದ್ದುಪಡಿಯೊಂದಿಗೆ ಮಾಡಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಕೆ.ಎಂ. ಶಿವಲಿಂಗೇಗೌಡ (ಅರಸೀಕೆರೆ) : ಮಾನ್ಯ ಅಧ್ಯಕ್ಷರೆ, ನಮ್ಮ ಬಯಲು ಸೀಮೆ ಭಾಗದಲ್ಲಿ ಅರಣ್ಯವನ್ನು ಕೈ ಬಿಡಿ ಎಂದು ಹೇಳುತ್ತಾರೆ. ನಮ್ಮಲ್ಲಿ ಅರಣ್ಯ ಭಾಗದಲ್ಲಿ ಮನೆಯನ್ನು ಕಟ್ಟಿಕೊಳ್ಳುವುದಿಲ್ಲ, ನಮ್ಮಲ್ಲಿ ಸರ್ಕಾರಿ ಭೂಮಿ ಗೋಮಾಳ, ರೆವಿನ್ಯೂ ಲ್ಯಾಂಡ್‌ನಲ್ಲಿ ಕಟ್ಟಿಕೊಳ್ಳುತ್ತೇವೆ. ನಮ್ಮದನ್ನು ಇದರಲ್ಲಿ ಸೇರಿಸಬೇಕು, ನಮ್ಮಲ್ಲೂ ನೂರಾರು ಮನೆಗಳನ್ನು ಸಕ್ರಮ ಮಾಡುವುದಕ್ಕೆ ಸಾಧ್ಯವಾಗಿಲ್ಲ. ಗ್ರಾಮ ಠಾಣಾದಲ್ಲಿ ಕಟ್ಟುತ್ತಾರೆ, ಇಲ್ಲಿ

ಕಟ್ಟಿದ್ದನ್ನು ಬಿಟ್ಟರೆ ಊರಿನ ಪಕ್ಕದಲ್ಲಿ ಗುಂಡು ತೋಪು, ಅಮೃತ್‌ಮಹಲ್ ಕಾವಲ್, ಗೋಮಾಳ ಈ ಮೂರು ಭೂಮಿಗಳಲ್ಲಿ ನೂರಾರು ವರ್ಷಗಳಿಂದ ಮನೆಗಳನ್ನು ಕಟ್ಟಿಕೊಂಡಿರುವಂಥದ್ದನ್ನು ಸಕ್ರಮಗೊಳಿಸುವುದಕ್ಕೆ ಸಾಧ್ಯವಾಗಿಲ್ಲ. ದಯವಿಟ್ಟು ಮಾನ್ಯ ಸಚಿವರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ, ತಾವು ಕೆರೆ ಅಂಗಳವೆಂದು ಹೇಳಿದ್ದೀರಿ, ಅದು ಬೇಡ. ಒಂದು ವೇಳೆ ಕೆರೆ ಅಂಗಳವಲ್ಲ ವೆಂದು ಸರ್ವೆಯಲ್ಲಿ ಬಂದರೆ, ಅದನ್ನು ಮಾಡಿಕೊಡಬೇಕು. ಇಲ್ಲಿ ಎಷ್ಟೋ ಜನರು ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಇದು ಕೆರೆಗೆ ಸೇರುತ್ತದೆಂದು ಇವತ್ತಿನವರೆಗೂ ಅವರಿಗೆ ಹಕ್ಕು ಪತ್ರವನ್ನು ಕೊಟ್ಟಿಲ್ಲ. ಆದ್ದರಿಂದ ನಾನು ಹೇಳತಕ್ಕಂಥದ್ದು ಏನೆಂದರೆ, ಈ ಮೂರು ಪಾಯಿಂಟ್‌ಗಳು ಗೋಮಾಳ, ಅಮೃತ್ ಮಹಲ್ ಕಾವಲ್ ಈ ಮೂರು ಐಟಂಗಳು ಏನು ಇವೆ, ಇಂಥ ಸ್ಥಳಗಳಲ್ಲಿ ಇದ್ದರೆ, ಸಕ್ರಮ ಹುಲ್ಲುಬಂದಿ ಇವು ನಾಲ್ಕೈದು ವಿಧಗಳಿವೆ, ಈ ನಾಲ್ಕೈದು ವಿಧಗಳು ಖರಾಬ್‌ಲ್ಯಾಂಡ್ ಎಂದು ಇದೆ, ಇದು ಸರ್ಕಾರಿ ಖರಾಬ್ ಲ್ಯಾಂಡ್ ಎಂದು ಮನೆಗಳನ್ನು ಕಟ್ಟಿಕೊಂಡು ಬಿಟ್ಟಿದ್ದಾರೆ. ಈಗ ಇದು ಸರ್ಕಾರಿ ಖರಾಬ್ ಲ್ಯಾಂಡ್ ಎಂದು ಕೊಡುವುದಿಲ್ಲ. ಅಂಥದಕ್ಕೆಲ್ಲಾ ಅವಕಾಶವನ್ನು ಕಲ್ಪಿಸಿ ಕೊಡಬೇಕು, ಮತ್ತೆ ನಮ್ಮ ಉಪ ನಾಯಕರು 30x40 ಎಂದು ಹೇಳಿದರು, ಅದು ಬೇಡ 60x40 ಎಂದು ಇರಲಿ.

ನಾವು ಹರಿಜನ ಕೇರಿಗಳಿಗೆ ಹೋದರೆ ಅವರು ನಮ್ಮನ್ನು ಮನೆಯೊಳಗೆ ಕರೆಯುವುದಿಲ್ಲ. ಏಕೆಂದರೆ, 20x30 ರಲ್ಲಿ ಮನೆಕಟ್ಟಿ ಕೊಂಡಿರುತ್ತಾರೆ, ಅಲ್ಲಿ ಗಂಡ–ಹೆಂಡತಿ ಮಲಗಿಕೊಳ್ಳಲೂ ಆಗುವುದಿಲ್ಲ. ಅವರೂ 40x60 ರಲ್ಲಿ ಕಟ್ಟಿಕೊಳ್ಳಲಿ. ಈ ದೇಶದಲ್ಲಿ ಅವರೂ ಒಳ್ಳೆಯ ನಾಗರೀಕರಾಗಿ ಬಾಳುವುದಕ್ಕೆ ಒಳ್ಳೆಯದಾಗುತ್ತದೆ. ಅವರು ಎಷ್ಟು ಅಳತೆಯಲ್ಲಿ ಕಟ್ಟಿಕೊಂಡಿರುತ್ತಾರೋ, ಅಷ್ಟನ್ನು ಸಕ್ರಮ ಮಾಡಿಕೊಡುವುದು ಆಗಬೇಕು. ಈಗೇನು ಹೊಸದಾಗಿ ಸೈಟುಗಳನ್ನು ವಿತರಣೆ ಮಾಡುತ್ತಿಲ್ಲವಲ್ಲ. ಬಹಳ ಸದಸ್ಯರು ಹೇಳಿದರು, ನನಗೆ ಖುಷಿಯಾಯಿತು, ಸೋಮಣ್ಣನವರು ಕೊಟ್ಟ ಮನೆಗಳೆಲ್ಲ ಖಾಲಿಯಾಗುತ್ತವೆ, ಬೆಳಿಗ್ಗೆ ಎದ್ದು ಹೋಗಿ ನಾವು social

forestನಲ್ಲಿ ಮನೆ ಕಟ್ಟಿಸಬಹುದು ಎಂದು ತಿಳಿದುಕೊಂಡಿದ್ದೆ. ಅದು ಕೇವಲ ಅಕ್ರಮ ಸಕ್ರಮ ಮಾತ್ರ. ಯಾರು ಈಗಾಗಲೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಅವರಿಗೆ ಸಕ್ರಮಗೊಳಿಸಿ ಕೊಡುವುದು ಅಷ್ಟೇ. ಹೊಸದಾಗೇನೂ ಸೈಟುಗಳನ್ನು ಕೊಡುತ್ತಿಲ್ಲ. ನಮಗೆ ಬೇಕೆಂದರೆ ಮತ್ತೆ ಕಟ್ಟಿಸಿ ಅದನ್ನು ಸಕ್ರಮಗೊಳಿಸ ಬೇಕಷ್ಟೇ. ಅದನ್ನು ಆಮೇಲೆ ನೋಡೋಣ. ಮಾನ್ಯ ಸಚಿವರು ನಾನು ಈಗಾಗಲೇ ಹೇಳಿದ ಅಮೃತ್ ಮಹಲ್ ಕಾವಲು, ಗೋಮಾಳ, ಖರಾಬು, ಗುಂಡುತೋಪು ಈ ನಾಲ್ಕು ಜಾಗಗಳಲ್ಲಿ ಮನೆಗಳನ್ನು ಅಕ್ರಮವಾಗಿ ಕಟ್ಟಿಕೊಂಡಿದ್ದರೆ ಅದನ್ನೂ ಸಕ್ರಮಗೊಳಿಸಿಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ (ಸೇಡಂ) : ಮಾನ್ಯ ಅಧ್ಯಕ್ಷರೆ, ಈ ಬಿಲ್ ಅನ್ನು ನಾವು ಖಂಡಿತವಾಗಿಯೂ ಸ್ವಾಗತ ಮಾಡುತ್ತೇವೆ. ನಮ್ಮ ಕೆಲವು ಮಿತ್ರರು ಹೇಳಿದರು, 30x40 ಅನ್ನು ಸಕ್ರಮ ಮಾಡಿ, 40x60 ಬೇಡ ಎಂದು ಹೇಳಿದರು. ಅವರು 60x40 ರಲ್ಲಿ ಕಟ್ಟಿಕೊಂಡಿದ್ದರೆ ಅಷ್ಟೇನ್ನೇ ಸಕ್ರಮ ಮಾಡಿಕೊಡಬೇಕು, 50x80 ಇದ್ದರೆ 50x80ಗೇ ಮಾಡಿಕೊಡಬೇಕು. ಏಕೆಂದರೆ, ಬಡವರು ಸ್ವಲ್ಪ ವಿಸ್ತೀರ್ಣವಾದ ಜಾಗದಲ್ಲಿದ್ದರೆ ತಪ್ಪೇನು? ಅದರಲ್ಲಿ ತಪ್ಪೇನೂ ಇಲ್ಲ. ಏಕೆಂದರೆ ನಾವು ಹೊಸದಾಗೇನೂ ಕೊಡುತ್ತಿಲ್ಲ, ಕೆಲವರು 30x40 ರಲ್ಲಿ ಕಟ್ಟಿಕೊಂಡಿರುತ್ತಾರೆ, ಇನ್ನೊಬ್ಬರು ಹೆಚ್ಚು ಜಾಗದಲ್ಲಿ ಕಟ್ಟಿಕೊಂಡಿರುತ್ತಾರೆ ಹಾಗಾಗಿ 30x40 ರಲ್ಲಿ ಇರುವುದನ್ನು ಮಾಡಬೇಕೆಂದು ಕೆಲವರು ಹೇಳಿದರು. ಈ ಕಾನೂನಿನಲ್ಲಿ ಈ ರೀತಿ ಇನ್ನೊಬ್ಬರಿಗೆ, ಮತ್ತೊಬ್ಬರಿಗೆ ಅವಕಾಶ ಕೊಡತಕ್ಕಂಥದ್ದಿಲ್ಲ. ಈಗಾಗಲೇ ಯಾರು ಅನಧಿಕೃತವಾಗಿ ಕಟ್ಟಿಕೊಂಡಿದ್ದಾರೆ, ಅದನ್ನು ಸಕ್ರಮಗೊಳಿಸತಕ್ಕಂಥದ್ದಕ್ಕಷ್ಟೇ ಈ ಕಾನೂನು ಸೀಮಿತವಾಗಿದೆ. ಹಾಗಾಗಿ, ನಾನು ಹೇಳುವುದೇನೆಂದರೆ, ಅದನ್ನು 40x60ಗಿಂತ ಕಡಿಮೆ ಮಾಡಬೇಡಿ, ಬೇಕಿದ್ದರೆ 50x80 ಎಂದು ಮಾಡಿ. ಎಷ್ಟು ವಿಸ್ತೀರ್ಣದಲ್ಲಿ ಮನೆ ನಿರ್ಮಾಣವಾಗಿದೆ ಅಷ್ಟಕ್ಕೆ ಪೂರ್ತಿ ನೀವು ಅನುಮತಿ ಕೊಡಬೇಕು. ಏಕೆಂದರೆ ಬಡವರೂ ಕೂಡ ಸ್ವಾಭಿಮಾನದಿಂದ

ಮತ್ತು ಒಳ್ಳೆಯ ರೀತಿಯಿಂದ ಬದುಕಲು ಆಸ್ಪದವಾಗಲು ನಿಮ್ಮೆಲ್ಲರ ಸಹಮತವಿರಬೇಕು ಎನ್ನುವುದು ಎಲ್ಲಾ ಸದಸ್ಯರಲ್ಲಿ ನನ್ನ ಮನವಿ. ಮಾನ್ಯ ರತ್ನಾಕರ್‌ರವರು ಹೇಲಿರುವಂಥ ಕೆಲವು ವಿಷಯಗಳು ಪದೇಪದೇ ನಮ್ಮ ಸಿ.ಎಲ್.ಪಿ.ಗಳಲ್ಲಿ ಕೂಡ ಚರ್ಚೆಯಾಗಿದೆ. ನಮ್ಮ ಭಾಗದಲ್ಲಿ ಅವರು ಹೇಳುವಂಥ ಸಮಸ್ಯೆಯಿಲ್ಲ. ಆದರೆ ನಿಮ್ಮ ಭಾಗದಲ್ಲಿ, ಅವರ ಭಾಗದಲ್ಲಿ ಇರುವಂಥ ಸಮಸ್ಯೆಗೆ ನಾವು ಖಂಡಿತವಾಗಿ ಪರಿಹಾರ ಹುಡುಕಲೇಬೇಕಾಗುತ್ತದೆ. ಏಕೆಂದರೆ ಒಂದು ಇಂಚು ಕೂಡ ಜಾಗ ಇಲ್ಲದೇ ಇರುವಂತ ಜನರಿದ್ದಾರೆ. ಅವರೂ ಸಹ ಭೂಮಿಯ ಮೇಲೆ ವಾಸಿಸಬೇಕಲ್ಲವೇ? ಅವರು ಆಕಾಶದಲ್ಲಿ ವಾಸಿಸಲು ಆಗುವುದಿಲ್ಲ. ಹಾಗಾಗಿ ನೀವು ಆ ಪದವನ್ನು ತೆಗೆದು ಅದಕ್ಕೆ ಯಾವುದಾದರೊಂದು ರೀತಿಯಲ್ಲಿ ಟೆಕ್ನಿಕಲ್ ಉಪಾಯವನ್ನು ಮಾನ್ಯ ಸಚಿವರು ಹುಡುಕಬೇಕು. ಈಗಾಗಲೇ ಅಲ್ಲಿ ಇರುವಂಥವರಿಗೆ ಸಕ್ರಮಗೊಳಿಸಲು ಉಪಾಯವನ್ನು ಹುಡುಕಿ, ಕಾನೂನು ತೊಡಕು ಬರದೇ ಇರುವ ರೀತಿಯಲ್ಲಿ ಅವರಿಗೆ ಸಹಾಯ ಮಾಡಬೇಕು. ಗೋಪಾಲ ಭಂಡಾರಿಯವರು ಹೇಳಿರುವಂಥ ವಿಷಯ ಬಹಳ ಮುಖ್ಯವಾದುದು. ಅದರಲ್ಲಿ ನೀವು ಒಂದು ನಿರ್ಬಂಧವನ್ನೇನು ಹಾಕಿದ್ದೀರಿ ಎಂದರೆ, ಪುರಸಭೆಗಳಲ್ಲಿ ಮತ್ತು ಗ್ರಾಮ ಪಂಚಾಯಿತಿಯ 3 ಕಿ.ಮೀ. ವ್ಯಾಪ್ತಿಯಲ್ಲಿದ್ದರೆ ಮಾಡುವುದಿಲ್ಲ ಎಂದರೆ, ಆ ವ್ಯಾಪ್ತಿಯಲ್ಲಿ ಇನ್ನೊಂದು ಗ್ರಾಮ ಪಂಚಾಯಿತಿ ಪ್ರಾರಂಭವಾಗುತ್ತದೆ. ಹೀಗಾದರೆ ನೀವು ಎಲ್ಲಿಯೂ ಸಕ್ರಮಗೊಳಿಸಲು ಆಗುವುದಿಲ್ಲ. ಅದೊಂದು ತಪ್ಪಾಗಿ ಬಂದಿದೆಯೋ ಅಥವಾ ಯಾರಾದರೂ wrong advise ಮಾಡಿದ್ದಾರೋ ಗೊತ್ತಿಲ್ಲ. ದಯವಿಟ್ಟು ಅದನ್ನು ತೆಗೆಯಿರಿ. ಪುರಸಭೆ ಎಂದು ಇರಬಹುದು ಆದರೆ ಗ್ರಾಮ ಪಂಚಾಯತಿ ಎನ್ನುವುದನ್ನು ನೀವು ಖಂಡಿತವಾಗಿಯೂ ತೆಗೆಯಬೇಕು. ಏಕೆಂದರೆ, ನೀವು ಅದನ್ನು ಹಾಗೆಯೇ ಇಟ್ಟರೆ ಈ ಕಾನೂನನ್ನು ಇಂಪ್ಲಿಮೆಂಟ್ ಮಾಡುವುದಕ್ಕೇ ಆಗುವುದಿಲ್ಲ. ಹಾಗಾಗಿ ಖಂಡಿತವಾಗಿಯೂ ನೀವು ಇದನ್ನು ಮಾಡಬೇಕು. ಮತ್ತೊಂದು ವಿಚಾರವೆಂದರೆ, ರೆವಿನ್ಯೂ ಸೈಟ್ಸ್ ಎಂದು ಯಾರು ತಮ್ಮ ಸ್ವಂತ ಭೂಮಿಯಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಅವುಗಳನ್ನೂ ಸಕ್ರಮ ಮಾಡಬೇಕು.

ಸರ್ಕಾರಿ ಭೂಮಿಯಲ್ಲಿ ಬಡವರು ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮ ಗೊಳಿಸುವ ಸಂದರ್ಭದಲ್ಲಿ, ರೆವಿನ್ಯೂ ಸೈಟುಗಳಲ್ಲಿ ಕಟ್ಟಿಕೊಂಡಿರುವ ಮನೆಗಳನ್ನು ಸಕ್ರಮಗೊಳಿಸುವುದಿಲ್ಲವೆಂದರೆ ಅದು ನ್ಯಾಯಬದ್ಧವಾಗಿ ಆಗುವುದಿಲ್ಲ ಎಂದು ನನಗನ್ನಿಸುತ್ತದೆ. ಇವತ್ತು ಇದರ ಜೊತೆಗೆ, ಅದನ್ನೂ ಕೂಡ ತಿದ್ದುಪಡಿ ತರಬೇಕಾಗುತ್ತದೆ. ಅವರಿಗೂ ಕೂಡ ಒಂದು ಅವಕಾಶವನ್ನು ಕೊಡಬೇಕಾಗುತ್ತದೆ. ಯಾರು ತಮ್ಮ ಜಮೀನಿನಲ್ಲಿ Non-Agricultural Purposeಗೆಂದು ಕನ್ವರ್ಟ್ ಮಾಡದೇ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಅವರಿಗೂ ಕೂಡ ನಾವು ಒಂದು ರಿಲೀಫ್ ಕೊಡಲೇಬೇಕು. ಏಕೆಂದರೆ ಮನೆಯನ್ನಂತೂ ಬೀಳಿಸುವುದಕ್ಕಾಗುವುದಿಲ್ಲ. ಕಷ್ಟಪಟ್ಟು ಬಡವರು ಮನೆಗಳನ್ನು ಕಟ್ಟಿಕೊಂಡಿರುತ್ತಾರೆ. ಅದನ್ನು ನಾವು ಕಸಿದುಕೊಳ್ಳುವುದಕ್ಕೆ ಆಗುವುದಿಲ್ಲ. ಅದಕ್ಕೂ ಕೂಡ ಮಾನ್ಯ ಸಚಿವರು positive ಆಗಿ ಏನಾದರೊಂದು ಕಾನೂನು ತಂದು ಅವರಿಗೂ ಕೂಡ ರಿಲೀಫ್ ಕೊಡಬೇಕು ಎನ್ನುವುದು ನನ್ನ ಮನವಿ.

ಡಾ: ಹೆಚ್.ಸಿ. ಮಹದೇವಪ್ಪ (ಟಿ.ನರಸೀಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಂದಾಯ ಸಚಿವರು ಆಕ್ರಮಿತ ಪ್ರದೇಶಗಳಲ್ಲಿ ವಾಸದ ಮನೆ ನಿರ್ಮಾಣದ ಪ್ರಕರಣಗಳನ್ನು ಸಕ್ರಮ ಮಾಡಲು ತಂದಿರುವಂಥ ಈ ಅಕ್ರಮ ಸಕ್ರಮ ಕಾಯಿದೆಯನ್ನು ನೋಡಿದಾಗ ಕಂದಾಯ ಮಂತ್ರಿಗಳು ಸದುದ್ದೇಶ ದಿಂದಲೇ ಈ ಕಾಯಿದೆಯನ್ನು ತಂದಿದ್ದಾರೆ. ಅವರು ಸ್ವಲ್ಪ ಜೋರು ಬಾಯಿ ಮಾಡಿ ಎಲ್ಲರನ್ನು ದಬಾಯಿಸುವಂಥ ಪ್ರಯತ್ನ ಮಾಡಿದರೂ ಸಹ ಅವರ ಮನಸ್ಸಿನಲ್ಲಿ ಒಂದು softness ಇದೆ. ಬಡವರಿಗೆ ಸಹಾಯ ಮಾಡಬೇಕು ಎನ್ನುವ ಮನೋಭಾವ ಅವರಿಗೆ ಎಲ್ಲೋ ಒಂದು ಕಡೆ ಇದ್ದೇ ಇದೆ. ಆದರೆ ಅದನ್ನು ಮಾಡುವಾಗ, we are all guided by the constitution and we have to discharge our duty in accordance with the provisions of the Law. ಬಡವರಿಗೆ ಸಹಾಯ ಮಾಡಬೇಕು ಎನ್ನುವ ಸದ್ದುದ್ದೇಶವಿದೆ. ಈ ಕಾಯಿದೆ ಮುಖಾಂತರ ಅದನ್ನು ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದಾರೆ.

ಆದರೆ ಅದನ್ನು ಮಾಡುವಾಗ, we are guided by the constitution and we have to function in accordance with the provisions of the Law. ರಾಜ್ಯಪಾಲರು observation ಅನ್ನು ಮಾಡಿದ್ದಾರೆ. ಎಲ್ಲಾ ಮಾನ್ಯ ಹಿರಿಯ ಸದಸ್ಯರೂ ಸಹ ಅವರು observation ಮಾಡಿರುವುದನ್ನು ಹೇಳಿದ್ದಾರೆ. "ವಾಸದ ಕಟ್ಟಡವನ್ನು 14–4–1998 ಕ್ಕಿಂತ ಮೊದಲು ನಿರ್ಮಿಸಲಾಗಿದ್ದಲ್ಲಿ ಒಬ್ಬ ವ್ಯಕ್ತಿಯು ಸರ್ಕಾರಕ್ಕೆ ಸೇರಿರುವ ಮತ್ತು ಅನಧಿಕೃತವಾಗಿ ಸ್ವಾಧೀನತೆ ಹೊಂದಿರುವ ಭೂಮಿಯ ಮಂಜೂರಾತಿಗೆ ಸಹ ಅದು ಅವಕಾಶ ಕಲ್ಪಿಸುತ್ತದೆ". ಭೂಮಿಯ ಮಂಜೂರಾತಿ ಅಂದರೆ land grantಗೆ ಅವಕಾಶ ಕಲ್ಪಿಸುತ್ತದೆ. There is a Land Grant Rule. ಇದು ಸರ್ಕಾರಿ ಭೂಮಿಯನ್ನು ಅತಿಕ್ರಮಣ ಮಾಡುವುದಕ್ಕೆ ಅವಕಾಶ ಕೊಡುತ್ತದೆ. ಇದರಿಂದ ಕಾನೂನಿನ ಉಲ್ಲಂಘನೆಯಾಗಿ ಸರ್ಕಾರಿ ಭೂಮಿಯ ಸ್ವಾಧೀನತೆ ಹೊಂದಲು ನೇರವಾಗಿ ಪ್ರೋತ್ಸಾಹಿಸುತ್ತದೆ. Whatever the Government land that is available as per the Land Grant Rule, the S.C./S.T. population must get 50% of that Government land. That is the Land Grant Rule. Because we have to function in accordance with the provisions of the Law. ಇಂಥ ಒಂದು ಉದ್ದೇಶ 1998 ರಲ್ಲೇ ಇತ್ತು. As one time measure ಮಾಡಿದ್ದರು, ಆದರೆ ಅದನ್ನು ಇನ್ನೂ ಮಾಡುವುದಕ್ಕೆ ಆಗಲಿಲ್ಲ. ನಮಗೆ ಒಂದು ಭಯ ಏನಿದೆ ಎಂದರೆ, D.T.C.L. Act ಅನ್ನು ನೋಡಿ. ಬಡವರಿಗೆ ದರಖಾಸ್ತು ಜಮೀನನ್ನು ಕೊಟ್ಟಿದ್ದೇವೆ. ಅವರೆಲ್ಲರೂ ಅದನ್ನು ಶ್ರೀಮಂತರಿಗೆ ಮಾರಿಬಿಟ್ಟಿದ್ದಾರೆ. Act ಗಳು suo motu ಆಗಿ ಕ್ರಮ ತೆಗೆದುಕೊಂಡು ಅದನ್ನೆಲ್ಲ ವಾಪಸ್ಸು ತೆಗೆದುಕೊಳ್ಳಬೇಕು. ಆದರೆ ಈ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಮಾನ್ಯ ಸದಸ್ಯರಾದ ವಿಶ್ವನಾಥ್‌ರವರು ನಿನ್ನೆ ಇಲ್ಲಿ ಒಂದು ಪ್ರಶ್ನೆ ಎತ್ತಿದರು. 17A & Bನಲ್ಲಿ ಉಲ್ಲಂಘನೆ ಮಾಡಿಬಿಟ್ಟು non-agricultural ಜಮೀನು ತೆಗೆದುಕೊಂಡರೆ, ಅದಕ್ಕೆ ಅಪೀಲ್ ಹಾಕಿಕೊಂಡರೆ ಹಾಗೋ ಹೀಗೋ

ಮಾಡಿ A.C.ಗಳು ಅದನ್ನು confirm ಮಾಡಿ ಕೊಡುತ್ತಾರೆ. ಮೈಸೂರಿನ D.C., who is the representative of the Government in a district ಏಕಾಏಕಿ 'ಬಿ' ಖರಾಬು ಜಮೀನನ್ನು 'ಎ' ಖರಾಬು ಎಂದು ಮಾಡಿ ಕೊಟ್ಟಿದ್ದಾರೆ. How a District Collector, who is the representative of the Government in a district, function as far as the Revenue Acts are concerned? ಇದನ್ನೆಲ್ಲ ನೋಡಿದರೆ, ಇವರೆಲ್ಲ ಸೇರಿಕೊಂಡು ಏನು ಮಾಡಬಹುದೆಂದರೆ one fine day ಯಾರಿಗೂ ಜಮೀನು ಸಿಗದಂತಾಗಬಹುದು. ಈಗ ಎಲ್ಲಿಯೂ ಸ್ಮಶಾನಕ್ಕೆ ಜಾಗ ಸಿಗುತ್ತಿಲ್ಲ. ಸತ್ತ ಮೇಲಾದರೂ ಎಲ್ಲರೂ ಒಂದು ಕಡೆ ಮಣ್ಣಿನಲ್ಲಿ ಸೇರೋಣವೆಂದರೆ, ಸ್ಮಶಾನದಲ್ಲಾದರೂ ಜಾತಿ ಹಾಳಾಗಿಹೋಗಲಿ ಎಂದರೆ, ಅಲ್ಲೂ ಸಹ ಜಾತಿಯ ಮೇಲೆ ಸ್ಮಶಾನ ಕೊಡಿ ಎಂದು ಒದ್ದಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ, ನೀವು ಈ ಕಾನೂನನ್ನು ತಂದು ಬಡವರಿಗೆ ಸಹಾಯ ಮಾಡಬೇಕು ಎನ್ನುವಾಗ Land Grant Rule ಅನ್ನು ಸಂವಿಧಾನದ ಮೂಲ ಆಶಯವನ್ನು, 1964 Act ಉಲ್ಲಂಘನೆಯಾಗದ ರೀತಿಯಲ್ಲಿ ನೀವು ಎಲ್ಲೆಲ್ಲಿ ಯಾರ್ಯಾರು ಸರ್ಕಾರಿ ಜಮೀನನ್ನು ಅತಿಕ್ರಮಣ ಮಾಡಿಕೊಂಡಿದ್ದಾರೆ ಎಂದು identify ಮಾಡಿ. ಅದು ಎಂಥೆಂಥ ಭೂಮಿಯಲ್ಲಿ ಇರಬೇಕು ಎನ್ನುವುದೆಲ್ಲವನ್ನೂ ನಮೂದು ಮಾಡಿದ್ದಾರೆ. I am not going to mention again. ನೀವು ಏನು ಅಕ್ರಮವನ್ನು ಸಕ್ರಮ ಮಾಡುವ ಉದ್ದೇಶವನ್ನಿಟ್ಟುಕೊಂಡಿದ್ದೀರಿ, ಅದು ನಿಜವಾದಂಥ ಬಡವರಿಗೆ ಸರ್ಕಾರದ ಜಮೀನಿನಲ್ಲಿ ಆಗುವ ರೀತಿಯಲ್ಲಿ ಮಾಡಿ. As one time measure it was already done in 1998. ಒಂದು ಸಲ ಮಾಡಿ ಇದನ್ನು ನಿಲ್ಲಿಸಬೇಕು. ಹಿಂದೆ ಹಳ್ಳಿಹಳ್ಳಿಗಳಲ್ಲಿ ರಾಜಕೀಯವನ್ನು excise ನಿಯಂತ್ರಣ ಮಾಡುತ್ತಿತ್ತು. ಆಮೇಲೆ mines ಬಂತು. ಈಗ real estate business ಬಂದು ಹೆಚ್ಚು ಕಡಿಮೆ ಎಲ್ಲರೂ ಪಂಚಾಯಿತಿಯಿಂದ ಹಿಡಿದು ಪಾರ್ಲಿಮೆಂಟಿನವರೆಗೂ ಅದೇ ಕೆಲಸವನ್ನು ಮಾಡುತ್ತಿದ್ದೇವೆ.

If this type of attitude continues, democracy will go down. ಅದಕ್ಕೆ ತಾವು ಜನಪರವಾಗಿ ಯೋಚನೆ ಮಾಡಿ ಬಡವರಿಗೆ ಸಹಾಯ ಮಾಡಬೇಕು. ಏನಿದೆ ಎಲ್ಲಾ ಮಾಡೋಣವೆನ್ನುವ ಉದ್ದೇಶವಿಟ್ಟುಕೊಂಡಿರುವುದರಿಂದ ಈ ಎಲ್ಲಾ ವಿಷಯಗಳನ್ನೂ ಗಮನದಲ್ಲಿಟ್ಟುಕೊಂಡು ಕಳ್ಳಕಾಕರ ಭೂ ದಂಧೆ ಮಾಡುವವರು ಇಲ್ಲಿ ಪ್ರವೇಶ ಮಾಡದ ರೀತಿಯಲ್ಲಿ ಮೂಗು ತೂರಿಸದಿರುವ ರೀತಿಯಲ್ಲಿ ಘನತೆವೆತ್ತ ರಾಜ್ಯಪಾಲರೇನು observation ಮಾಡಿದ್ದಾರೆ, ಅದೇ ಕಾರಣಕ್ಕೆ Land Reforms Act violate ಆಗುತ್ತದೆನ್ನುವ ಕಾರಣಕ್ಕೆ ಇದನ್ನು ವಾಪಸ್ ಕಳಹಿಸಿದ್ದಾರೆ. Estate ದಂಧೆ ಪ್ರಾರಂಬವಾಗುತ್ತದೆನ್ನುವ ಕಾರಣಕ್ಕಾಗಿ ಇದನ್ನು ವಾಪಸ್ ಕಳುಹಿಸಿದ್ದಾರೆಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ಸರ್ಕಾರದ ಜಮೀನು ರಕ್ಷಣೆ ಮಾಡುವುದರಲ್ಲಿ ಡಿ.ಸಿ.ಗಳ ನಡವಳಿಕೆ ಏನಿದೆ, A.C. suo-motu action ತೆಗೆದುಕೊಂಡು ದರಖಾಸ್ತ್ ಜಮೀನುಗಳನ್ನೆಲ್ಲ ವಾಪಸ್ ತೆಗೆದುಕೊಳ್ಳಬೇಕು. 100, 200, 500 ಎಕರೆ ಇದೆ. 17(a)(b) ಎಲ್ಲಾ ನೋಡಿದರೆ ಇದರಲ್ಲಿ ರಾಜಕಾರಣಿಗಳು, officials, businessman ಗಳ ಜಮೀನೇ ಇರುವುದು. ರೈತರ ಯಾರದೂ ಜಮೀನಿಲ್ಲ. This is the state of affairs. So, ಇದನ್ನು ಗಮನದಲ್ಲಿಟ್ಟುಕೊಂಡು ನೀವು ಬಡವರಿಗೆ ಸಹಾಯ ಮಾಡಬೇಕೆನ್ನುವ ಸದುದ್ದೇಶವನ್ನಿಟ್ಟುಕೊಂಡಿದ್ದೀರಿ ಆ ಸದುದ್ದೇಶದಿಂದ ಒಂದು ಅವಧಿಗೆ ಮಾಡಿ ಮತ್ತೆ ಇದು ಜೀವಂತವಾಗಿರದಂತೆ ನೋಡಿಕೊಳ್ಳಿ. ಸರ್ಕಾರ ಪರ್ಯಾಯವಾಗಿ ಬಡವರಿಗೆ ವಸತಿಗಳನ್ನು ಒದಗಿಸುವುದಕ್ಕೆ ಜಮೀನನ್ನು ಖರೀದಿಸಿ ನೀವು ಸಮುಚ್ಚಾಲಯಗಳನ್ನು ಕಟ್ಟಲಿಕ್ಕೆ ಆ ತರಹದ ಮುಂದಿನ ಆಲೋಚನೆ ಇಟ್ಟುಕೊಂಡು ಮಾಡಬೇಕೆಂದು ಹೇಳಿ ನೀವು ಸದುದ್ದೇಶದಿಂದ ತಂದಿರುವ ಕಾಯ್ದೆ ತುಂಬಾ ಎಚ್ಚರಿಕೆಯಿಂದ, Land Reforms Act ಅನ್ನು ಯಾವುದೇ ಕಾರಣಕ್ಕೆ ತಪ್ಪಿಸಿಕೊಳ್ಳದೇ ಇರುವ ರೀತಿಯಲ್ಲಿ ಕಡಿವಾಣ ವಿಟ್ಟುಕೊಂಡು ಮಾಡಬೇಕೆಂದು ಹೇಳಿ ತಮ್ಮ ಮೂಲಕ ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳ, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಎಲ್ಲಾ ಶಾಸಕರು, ವಿರೋಧ ಪಕ್ಷದ ನಾಯಕರು ನಿಜಕ್ಕೂ ಕೂಡ ಒಳ್ಳೆಯ ಸಲಹೆಗಳನ್ನು ಕೊಡುತ್ತಾ, ಈ ಬಡವರಿಗೆ ವರ ಸೈಟ್‌ನಲ್ಲಿ ಮನೆ ಕಟ್ಟಿಕೊಳ್ಳುವುದಕ್ಕೆ ಸ್ವಾಗತ ಕೋರಿದ್ದಕ್ಕೆ ನಾನು ಇಡೀ ಸದನವನ್ನು ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸುವುದಕ್ಕೆ ಇಷ್ಟಪಡುತ್ತೇನೆ. ಎಲ್ಲರಿಗೂ ಬಡವರಿಗೆ ಸೈಟ್, ಮನೆಯಾಗಬೇಕೆಂಬ ಬಗ್ಗೆ ಕಳಕಳಿ ಇದೆ. ಇದರಲ್ಲಿ 2–3 ಅಂಶಗಳನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದ ಸಿದ್ಧರಾಮಯ್ಯನವರು, ಜಯಚಂದ್ರರವರು, ಬಂಡೆಪ್ಪ ಖಾಶೇಂಪೂರ್, ಪ್ರಮುಖರು ಪ್ರಸ್ತಾಪ ಮಾಡಿದ್ದೇನೆಂದರೆ, ಮಾನ್ಯ ರಾಜ್ಯಪಾಲರೇನು ಹೇಳಿದ್ದಾರೆ ಅದನ್ನು ನಮ್ಮ ಗಮನಕ್ಕೆ ತಂದಿದ್ದೀರಿ. ಇಲ್ಲಿ ಮಾನ್ಯ ರಾಜ್ಯಪಾಲರು ಪ್ರಸ್ತಾಪ ಮಾಡಿರುವುದು, ಸಾರ್ವಜನಿಕ ಭೂಮಿ ಬೃಹತ್ ಪ್ರಮಾಣದಲ್ಲಿರುವಂಥದ್ದನ್ನು ಅಕ್ರಮವಾಗಿ ಕಬಳಿಕೆ ಮಾಡುತ್ತಿದ್ದಾರೆ. ಎರಡನೆಯದಾಗಿ, real estate ದಂಧೆಗೆ ದುಷ್ಟ ಭೂ ಕಬಳಿಕೆದಾರರು ಇದರ ಮುಖಾಂತರ ಹೇಗೋ ಮಾಡಿ ನುಣಚಿಕೊಳ್ಳುತ್ತಿದ್ದಾರೆಂದು ಹೇಳಿದ್ದಾರೆ. ಭೂಮಿಯನ್ನು ಎಕರೆಗಟ್ಟಲೆ ಅಲ್ಲ. ಇದು 60x40 ಸೈಟ್. 40x60 ಸೈಟ್ ಬಗ್ಗೆ ಕೂಡ ನಾನು ಇಲ್ಲಿ ಪ್ರಸ್ತಾಪ ಮಾಡುತ್ತೇನೆ. ತಾವು ದಯಮಾಡಿ ಕೇಳಬೇಕು. 2400 ಚ.ಅ.ಯಲ್ಲಿ ಕಟ್ಟಿದ ಮನೆ ಅಥವಾ ಕಟ್ಟಡ ಪ್ರದೇಶದ ವಾಸ್ತವಿಕವಾಗಿ ಆಕ್ರಮಿತವಾದ ಪ್ರದೇಶ, ಅದರಲ್ಲಿ ಯಾವುದು ಕಡಿಮೆಯೋ ಅದನ್ನು ಸಕ್ರಮಗೊಳಿಸತಕ್ಕದ್ದು. ಅದು 40x60 ಆಗಿರಬಹುದು, ಅಥವಾ ಅದಕ್ಕಿಂತ ಚಿಕ್ಕದಿರಬಹುದು. ಯಾವುದು ಚಿಕ್ಕದೋ ಅದನ್ನು ನಾವು ಸಕ್ರಮಗೊಳಿಸ ಬೇಕೆನ್ನುವ ತೀರ್ಮಾನವಿದೆ. ಕಳೆದ ಬಾರಿ ಇಲ್ಲಿ ಚರ್ಚೆಯಾಯಿತು. ಅನೇಕರು ಪ್ರಸ್ತಾಪ ಮಾಡಿದರು. ಒಂದು ಮನೆ ಕಟ್ಟಿಕೊಂಡಿರುತ್ತಾರೆ, ಅಲ್ಲಿ ಎಮ್ಮೆ, ಎತ್ತು, ಸಾಕುತ್ತಾರೆ, ಒಂದೆರಡು ತೆಂಗಿನ ಗಿಡ ನೆಟ್ಟಿರುತ್ತಾರೆ, ಇನ್ನೂ ಸ್ವಲ್ಪ ಜಾಗ ಕೊಡಬೇಕು ಎಂದು ಹೇಳಿದರು. ತಾವೆಲ್ಲ ಪ್ರಸ್ತಾಪ ಮಾಡಿದ್ದಕ್ಕೋಸ್ಕರವೇ ಇದನ್ನು ಕಳೆದ ಬಾರಿಯೇ 40x60 ಗೆ ಸೀಮಿತ

ಮಾಡಿದ್ದು. ಬೇರೆ ಇನ್ನೇನೂ ಉದ್ದೇಶವಿಲ್ಲ. ಎರಡನೆಯದಾಗಿ, ಯಾವ ಕಾರಣಕ್ಕೆ ಎಂದು ಮತ್ತೆ ಹೇಳುತ್ತೇನೆ, ಭೂಗಳ್ಳರ ಪ್ರಶ್ನೆ ಇದರಲ್ಲಿ ಉದ್ಭವ ವಾಗುವುದಿಲ್ಲ. ಏಕೆಂದರೆ ಇದು ಸೈಟ್. ಯಾವುದೋ ಕಾಡಿನಲ್ಲಿ ಅಲ್ಲಿ ವಾಸ ಮಾಡುತ್ತಿರತಕ್ಕಂಥ ಜಾಗದಲ್ಲಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರದ ಭೂಮಿಯಲ್ಲಿ ಒಂದು ಸೈಟ್‌ನಲ್ಲಿ ಒಂದು ಗುಡಿಸಲು ಹಾಕಿಕೊಂಡಿರುತ್ತಾರೆ, ಅದನ್ನು ಅವರಿಗೆ ಸಕ್ರಮ ಮಾಡಿಕೊಡುವುದು ಬಿಟ್ಟರೆ, ಬಾಲಸುಬ್ರಹ್ಮಣಿಯನ್ ವರದಿಯ ಬಗ್ಗೆಯೂ ಬರುವುದಿಲ್ಲ, ಎ.ಟಿ.ರಾಮಸ್ವಾಮಿ ವರದಿಯ ಪ್ರಶ್ನೆಯೂ ಇಲ್ಲಿ ಉದ್ಭವವಾಗುವುದಿಲ್ಲ. ಏಕೆಂದರೆ ಅವೆಲ್ಲ ಎಕರೆಗಟ್ಟಲೇ ಇರುವಂಥವು. ಜಯಚಂದ್ರರವರೆ, ಬಾಲಸುಬ್ರಹ್ಮಣಿಯನ್, ಎ.ಟಿ. ರಾಮಸ್ವಾಮಿಯವರ ವರದಿಗಳ ಬಗ್ಗೆ ಕಳೆದ ಬಾರಿಯೂ ತಾವು ಪ್ರಸ್ತಾಪ ಮಾಡಿದ್ದೀರಿ. ಎ.ಟಿ. ರಾಮಸ್ವಾಮಿ ವರದಿಯ ಬಗ್ಗೆ ಅದೇ ರೀತಿ ಬಾಲಸುಬ್ರಹ್ಮಣಿಯನ್ ವರದಿ ಬಗ್ಗೆ ಏನೇನು ಕ್ರಮ ನಾವು ತೆಗೆದು ಕೊಂಡಿದ್ದೇವೆ, ಎಷ್ಟೆಷ್ಟು ಎಕರೆ ಜಾಗವನ್ನು ನಾವು ವಾಪಸ್ ತೆಗೆದು ಕೊಂಡಿದ್ದೇವೆ ಇದನ್ನೆಲ್ಲ ಪ್ರಸ್ತಾಪ ಮಾಡುತ್ತೇನೆ. ಇಲ್ಲಿ ತುಂಬಾ ಸ್ಪಷ್ಟವಾಗಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯಪಾಲರು ಏಕೆ confusion ಮಾಡಿಕೊಂಡರೋ ಗೊತ್ತಿಲ್ಲ. ಗ್ರಾಮೀಣ ಪ್ರದೇಶದಲ್ಲಿರುವ ಸರ್ಕಾರಿ ಸೈಟ್‌ನಲ್ಲಿ ಕಟ್ಟಿಕೊಂಡಿರುವ ಮನೆ. ಇದನ್ನು ನೋಡುತ್ತಿದ್ದಹಾಗೆಯೇ ಭೂ ಕಬಳಿಕೆದಾರರೆಂದ ತಕ್ಷಣ ಯಾರೋ ಹತ್ತಾರು, ಎಕರೆಗಟ್ಟಲೇ ಏನೋ ಮಾಡಿಬಿಟ್ಟಿದ್ದಾರೆಂದು ಭಾವಿಸಿಕೊಂಡಿದ್ದಾರೆ. ಆ ಕಡುಬಡವನಿಗೆ ಆ ಶಕ್ತಿ ಇಲ್ಲ. ಆ ಕಡುಬಡವ 20 ವರ್ಷ, 30 40 ವರ್ಷಗಳಿಂದ ಒಂದು ಗುಡಿಸಲು ಕಟ್ಟಿಕೊಂಡಿರುವುದಕ್ಕೆ ಈಗೇನು ಸರ್ಕಾರ ಆಶ್ರಯ, ಬೇರೆ ಬೇರೆ ಯೋಜನೆಗಳ ಮುಖಾಂತರ ಮನೆ ಕೊಟ್ಟಿದೆ ಆ ಮನೆಗಳನ್ನು ಕಟ್ಟುವುದಕ್ಕೆ ಅವನಿಗೊಂದು ಅವಕಾಶವಿದೆ. ಆ ಸೈಟ್ ನಿನ್ನದು ಇದರಲ್ಲಿ ನಿನ್ನ ಮನೆ ಕಟ್ಟಿಕೋ ಎಂದು ಇದಕ್ಕೆ ಮಾತ್ರ ಅವಕಾಶ ಮಾಡಿರುವುದು ಬಿಟ್ಟರೆ ಇದರಲ್ಲಿ ಖಂಡಿತ ಯಾವುದೇ ಭೂ ಕಬಳಿಕೆದಾರರಿಗೆ ಒಂದು ಇಂಚು ಭೂಮಿಯನ್ನೂ ಕೊಡುವುದಕ್ಕೆ ಈ ಸರ್ಕಾರ ಅವಕಾಶ ಮಾಡುವುದಿಲ್ಲ.

ಇದರ ಬಗ್ಗೆ ನೂರಕ್ಕೆ ನೂರು ನಾನು ಆಶ್ವಾಸನೆ ಕೊಡುತ್ತೇನೆ. ಮೂರನೆಯದಾಗಿ, ಸರ್ವೋಚ್ಚ ನ್ಯಾಯಾಲಯ ಏನು ಹೇಳಿದೆ, ದೀರ್ಘಕಾಲದಿಂದ ಅಕ್ರಮವಾಗಿ ಕಟ್ಟಿರುವ ಜಾಗದಲ್ಲಿ ಅಧಿಕವಾಗಿ ಹಣವನ್ನು ವೆಚ್ಚ ಮಾಡಿ ಕಟ್ಟಿರುವ ಕಟ್ಟಡ. ತುಂಬಾ ಸ್ಪಷ್ಟವಾಗಿ ನಾವು ಇದರ ಬಗ್ಗೆ ಕಳೆದ ಬಾರಿ ನಿಮ್ಮ ಹತ್ತಿರ ಪ್ರಸ್ತಾಪ ಮಾಡಿದ್ದೇವೆ. ಆಶ್ರಯ ಯೋಜನೆಯ ಷರತ್ತುಗೊಳಪಟ್ಟು ಎಂದು ಹೇಳಿದ್ದೇವೆ. ಅತಿ ಹೆಚ್ಚು ಹಣವನ್ನು investment ಮಾಡಿಕೊಂಡು ಕುಳಿತಿರುವವರಿಗೆ ಸೈಟ್ ಕೊಡುವ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಮಾನ್ಯ ರಾಜ್ಯಪಾಲರು ಇದರ ಬಗ್ಗೆ ಏಕೆ ಗಮನಹರಿಸಲಿಲ್ಲ ಗೊತ್ತಿಲ್ಲ. ಏಕೆಂದರೆ conditions ಬಗ್ಗೆ ತಾವು ಗಮನಿಸಿರಬಹುದು. ಇವು ತಾವೇ ಕೊಟ್ಟಿರುವ ಸಲಹೆಗಳು. ಏಕೆಂದರೆ, ಕಳೆದ ಬಾರಿ ತಾವು ಸರ್ವಾನುಮತದಿಂದ ಬಿಲ್ ಅನ್ನು ಪಾಸ್ ಮಾಡುವುದು ಅಷ್ಟು ಸುಲಭದ ಕೆಲಸವಲ್ಲ. ತಾವು ಕಳೆದ ಬಾರಿ ಒಳ್ಳೆಯದಕ್ಕೆ ಪೂರ್ಣ ಬೆಂಬಲ ಕೊಟ್ಟಿದ್ದೀರಿ. ಮಾನ್ಯ ರಾಜ್ಯಪಾಲರು ವಾಪಸ್ ಕಳುಹಿಸಿದ್ದಾರೆನ್ನುವ ಒಂದೇ ಕಾರಣಕ್ಕೆ ನೀವು ಸಾಕಷ್ಟು ಚರ್ಚೆ ಮಾಡಿದ್ದೀರಿ. ನೀವು ನ್ಯಾಯವಾಗಿ ಮಾನ್ಯ ರಾಜ್ಯಪಾಲರಿಗೆ ಹೇಳಬೇಕಾಗಿತ್ತು. ಇದು ಬಡವರು ಒಂದು ಸೈಟ್‌ನಲ್ಲಿ ಮನೆ ಕಟ್ಟಿಕೊಂಡಿದ್ದಾರೆಂದು ನೀವು ಏತಕ್ಕೆ ಹೀಗೆ ಮಾಡಿದ್ದೀರಿ ಎಂದು ಹೇಳಿದರೆ ನಿಜಕ್ಕೂ ಇದು ಇಲ್ಲಿಯವರೆಗೆ ಬರುತ್ತಿರಲಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಒಂದು ಮಸೂದೆಯನ್ನು ಪಾಸ್ ಮಾಡಿದ ಮೇಲೆ ಮಾನ್ಯ ರಾಜ್ಯಪಾಲರು ಕೆಲವು queries ಹಾಕುವುದು ಸ್ವಾಭಾವಿಕ, Oncertain principles ಹಾಕಿರುತ್ತಾರೆ, Court Judgments ಹಾಕಿರುತ್ತಾರೆ. ಆಗ ಅದನ್ನು convince ಮಾಡತಕ್ಕಂಥ ಜವಾಬ್ದಾರಿ ನಿಮ್ಮದು.

ಶ್ರೀ ಕೆ.ಎಸ್. ಈಶ್ವರಪ್ಪ : ನಾವು ಬಡವರಿಗೆ ಸಹಾಯ ಮಾಡುವಂಥ ಸಂದರ್ಭದಲ್ಲಿ ಅವರು Supreme Court Judgment quote ಮಾಡಿ ಇದು ಭೂ ಕಬಳಿಕೆದಾರರಿಗೆ ಅನುಕೂಲವಾಗುತ್ತದೆಂಬುದನ್ನು ಹೇಳಿ ಏತಕ್ಕೆ ಹೀಗೆ ಮಾಡಿದರೋ ಗೊತ್ತಿಲ್ಲ. ಏಕೆಂದರೆ, ಮಾನ್ಯ ರಾಜ್ಯಪಾಲರ ಬಗ್ಗೆ ಇಲ್ಲಿ ನಾನು

ಪ್ರಸ್ತಾಪಿಸಿದರೆ ನನಗೇ ಬೇಸರವಾಗುತ್ತದೆ. ಏಕೆ ಅವರು ಈ ರೀತಿ ಮಾಡಿದರು ಎಂದು. ನಾನು ಅವರ ಹತ್ತಿರ ವೈಯಕ್ತಿಕವಾಗಿ ಪ್ರಸ್ತಾಪ ಮಾಡಿ ಬಂದಿದ್ದೇನೆ.

ಡಾ: ಹೆಚ್.ಸಿ. ಮಹದೇವಪ್ಪ : It is only to pass comments.

ಶ್ರೀ ಕೆ.ಎಸ್. ಈಶ್ವರಪ್ಪ : ನನಗೆ ಮಾನ್ಯ ರಾಜ್ಯಪಾಲರ ಸ್ಥಾನದ ಬಗ್ಗೆ ನೂರಕ್ಕೆ ನೂರು ಗೌರವವಿದೆ. ನಾನು ಅದರ ಬಗ್ಗೆ ಹೇಳುತ್ತಿಲ್ಲ. ನಾನು ಅವರ ಹತ್ತಿರ ಪ್ರಸ್ತಾಪ ಮಾಡಿ ಕೂಡ ಬಂದಿದ್ದೇನೆ. ಖಂಡಿತ ಮಾಡುತ್ತೇನೆಂದು ಹೇಳಿದ್ದರು. ಇದರಲ್ಲಿ 2–3 ವಿಶೇಷವಾದ ಅವರ observations ಏನೆಂದರೆ, ಭೂ ಕಬಳಿಕೆದಾರರು ಇದರಲ್ಲಿ land ಪ್ರಶ್ನೆ ಬರುವುದಿಲ್ಲ ಒಂದು ಸೈಟ್ ಕೊಡತ್ತಿದ್ದೇವೆ. ಎರಡೆನೆಯದಾಗಿ, Supreme Court Judgment. ಅಧಿಕವಾದ investment ಮಾಡಿ ಕಟ್ಟಿದ ಕಟ್ಟಡ. ಅವನು ಆಶ್ರಯ ಸೈಟ್‌ನಲ್ಲಿ ಮನೆ ಕಟ್ಟುವುದು ಎಂದು ನಾವು ಷರತ್ತು ಹಾಕಿದ ಮೇಲೆ ಅವರು ಎಷ್ಟೇ investment ಮಾಡಿದರೂ ನಾವು ಕೊಡತ್ತೇವೆಯೇ? ಎರಡೇ ವಿಶೇಷವಾದುದು. ಉಳಿದದ್ದರ ಬಗ್ಗೆ, ಮಾನ್ಯ ರಾಜ್ಯಪಾಲರ ಬಗ್ಗೆ ನೀವೂ ಪ್ರಸ್ತಾಪ ಮಾಡಿಲ್ಲ, ನಾನೂ ಕೂಡ ಹೇಳಿಲ್ಲ. ನಾನು ಅದಕ್ಕೋಸ್ಕರ ಈ ಸಂದರ್ಭದಲ್ಲಿ ಹೇಳಿದ್ದು. ವಿಶೇಷವಾಗಿ ಅರಣ್ಯ ಭೂಮಿ ಬಗ್ಗೆ, ಗೋಮಾಳದ ಬಗ್ಗೆ, ಕೆರೆ ಅಂಗಳದ ಬಗ್ಗೆ ಅಮೃತಮಹಲ್ ಕಾವಲು ಬಗ್ಗೆ ಇದೆಲ್ಲ ಪ್ರಸ್ತಾಪ ಮಾಡಿದ್ದಾರೆ. Deemed forest ಬಗ್ಗೆ ಪ್ರಸ್ತಾಪಿಸಿದ್ದೀರಿ. ಇಲ್ಲಿ ಒಂದು ವಿಷಯವನ್ನು ತಾವೆಲ್ಲ ಗಮನಿಸಿರಬಹುದು. ಮಾನ್ಯ ತೀರ್ಥಹಳ್ಳಿ ಶಾಸಕರು ಪ್ರಸ್ತಾಪ ಮಾಡಿದ್ದರು. ಯಾವ ಭೂಮಿ ಕಂದಾಯ ಭೂಮಿ ಇದ್ದರೂ ಅರಣ್ಯ ಇಲಾಖೆಯವರಿಗೆ ನಾವೇ supreme ಎನ್ನುವ ವಿಶೇಷ ಆಸಕ್ತಿ ಇದೆ. ಇದು ನಮ್ಮದೇ ಎನ್ನುತ್ತಾರೆ. ಅನ್ನುವುದಷ್ಟೇ ಅಲ್ಲ, ಅನೇಕ ಕಂದಾಯ ಭೂಮಿ ಇರುವ ಜಾಗಗಳಿಗೂ ಕೂಡ FIR ಹಾಕಿಬಿಟ್ಟರು. ನಾನು ಅಧಿಕಾರಿಗಳನ್ನು ಕರೆದು, ನಿಮಗೇನಾಗಿದೆ ಏಕೆ ಹಾಕಿದ್ದೀರಿ ಎಂದು ಕೇಳಿದೆ. Supreme Court Judgment ಇದೆ ಎಂದರು. ನಾನು supreme Court Judgment ತೆಗೆದುಕೊಂಡು ಬನ್ನಿ ಎಂದೆ. ಆಮೇಲೆ ಅವರು FIR ಹಾಕಿದ್ದು

ತಪ್ಪಾಯಿತೆಂದರು. ಇಲ್ಲಿ ನಾನು ತಮ್ಮೆಲ್ಲರ ಸಹಕಾರದಿಂದ ಹೇಳುವುದಿಷ್ಟೇ, ನಿಜ. ಇದು ಸುಮಾರು 8–10 ಜಿಲ್ಲೆಗಳಲ್ಲಿ ಸ್ವಲ್ಪ ಸಮಸ್ಯೆ ಬರುತ್ತದೆ. ಉಳಿದ್ಯಾವ ಜಿಲ್ಲೆಗಳಲ್ಲೂ ಈ ಸಮಸ್ಯೆ ಬರುವುದಿಲ್ಲ. ಲಕ್ಷಾಂತರ ಸೈಟ್‌ಗಳಿಗೆ ಈ ಬಿಲ್ ಪಾಸ್ ಮಾಡುತ್ತಿದ್ದಾಹಾಗೆ ಆದಷ್ಟು ಬೇಗ ನಾವು ಅದಕ್ಕೆ G.O. ಹೊರಡಿಸುತ್ತಿದ್ದ ಹಾಗೆ ಎಲ್ಲ ಶಾಸಕರಿಗೂ ಮನವಿ ಮಾಡುತ್ತೇನೆ, ನಾವು ಕೊಟ್ಟಂಥ ಸಮಯಗೊಳಗೆ ಆ ಬಡವರಿಗೆ ಅರ್ಜಿ ಹಾಕಿಸಿ, ತಕ್ಷಣ ಇದನ್ನು ಗ್ರ್ಯಾಂಟ್ ಮಾಡಿಕೊಟ್ಟು ನಿಮಗೇನು ಮನೆಗಳನ್ನು sanction ಆಗಿವೆ ಅದರಲ್ಲಿ ಕಟ್ಟಿಸಿಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಪ್ರಾರ್ಥನೆ ಮಾಡುತ್ತೇನೆ. ಇಲ್ಲಿ ಅರಣ್ಯ ಎಂದು ಬಂದ ತಕ್ಷಣ ಎಲ್ಲರಲ್ಲೂ ಒಂದು ಕಳಕಳಿ ಇದೆ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ. ನೀವೇ ಶಾಸಕರು, ಇದು ಅರಣ್ಯ ಭೂಮಿಯಲ್ಲ, ನಿಮ್ಮ ಅರಣ್ಯ ಭೂಮಿ ಎಂದು ಎಲ್ಲಿದೆ ಎಂದು ಹೇಳಿದರೆ ಸಾಕಷ್ಟು ಕಡೆ convince ಆಗುತ್ತಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ರಮಾನಾಥ ರೈರವರು Any land belongs to the Government ಎಂದು ಹೇಳಿದರು. ನಮ್ಮಲ್ಲಿ ಹುಲ್‌ಬನ್ನಿ ಖರಾಬ್ ಇದೆ, ಖರಾಬ್ ಇದೆ, ಗೋಮಾಳವಿದೆ, ಸೇಂದಿ ವನ ಎಂದಿದೆ, ಗುಂಡುತೋಪು ಎಂದು ಇದೆ ಎಂದು ಕೆಲವರೆಲ್ಲ ಮಾತನಾಡುವಾಗ ಹೇಳಿದರು. ಆಗ ಅವರು ಚೆಕ್ ಮಾಡುವುದಕ್ಕೆ ಅವಕಾಶವಿದೆ. Confusion ಇಲ್ಲ, easy ಯಾಗಿ solve ಆಗಬೇಕೆಂದರೆ, ನನ್ನ ಸಲಹೆ ಏನೆಂದರೆ, ಇದರಲ್ಲಿ Government land means… for the purpose of this Act, enforcement of this Act, Government land ಎಂದರೇನು? Government land includes, Forest land ಎಂದು ಸೇರಿಸುವುದಕ್ಕೆ ನಿಮಗೆ ಅಧಿಕಾರವಿಲ್ಲವೆನಿಸುತ್ತದೆ, ಅದು ಬಿಟ್ಟು ಇನ್ನುಳಿದುದೆಲ್ಲವನ್ನೂ Government land ಎಂದರೆ problem ಬರುವುದಿಲ್ಲ. ನಾನೊಂದು ಮಾತು ಹೇಳುತ್ತೇನೆ. Hypothetical ಆಗಿ ನಾನೊಂದು ಪ್ರಶ್ನೆ ಕೇಳುತ್ತೇನೆ.

Government land includes ಎಂದು ಬರುತ್ತದೆ. ಮಾನ್ಯ ರಾಜ್ಯಪಾಲರು ಈ ತರಹ ಅನುಮಾನ ವ್ಯಕ್ತಪಡಿಸಿದ್ದಾರೆಂದು ಹೇಳುತ್ತಾರೆ. ನಾವು ಇವತ್ತು ಲೆಕ್ಕ ಹಾಕೋಣ. ನಾವು Act ಅನ್ನು pass ಮಾಡುತ್ತೇವೆ. ನಾವು Rules ಮಾಡುವುದಿಲ್ಲ. ನಾವು ಇದರಲ್ಲಿ Rules ಮಾಡುವುದಕ್ಕೆ provision ಮಾಡಿಕೊಂಡಿದ್ದೇವೆ. ಎಲ್ಲಿ ಎಂದರೆ 90(c) Sub Section (1) ರ ಪ್ರಕಾರ Rules ಮಾಡಲೇಬೇಕು. 1998ರಿಂದ ಇಲ್ಲಿಯವರೆಗೆ ಮಾನ್ಯ ರಾಜ್ಯಪಾಲರು query ಹಾಕಿದ್ದಾರಲ್ಲ, ಏಕೆ ಇಲ್ಲಿಯವರೆಗೆ ಆಗಿಲ್ಲವೆಂದರೆ, Rules ಆಯಿತೆ? Rules ಆಗಲಿಲ್ಲ. ಅದಕ್ಕೆ Rules ಮಾಡತಕ್ಕಂಥದ್ದು it is mandatory. ನೀವು Act ಮಾಡಿದಾಕ್ಷಣ ದೊಡ್ಡ ಸಾಧನೆ ಮಾಡಲಿಲ್ಲ. Rules ಅನ್ನು ಕೂಡ simultaneous ಆಗಿ ಮಾಡಬೇಕಾದ ಜವಾಬ್ದಾರಿ ಇದೆ. ಒಂದು ವಿಷಯವನ್ನು ಮಾನ್ಯ ಸಚಿವರು ಅರ್ಥ ಮಾಡಿಕೊಳ್ಳಬೇಕು. ಭೂಮಿಯ ಬೆಲೆ ಹಳ್ಳಿಗಳಲ್ಲೂ ಸಹ ಎಲ್ಲ ಕಡೆ ಸಹ ಜಾಸ್ತಿ ಆಗಿದೆ. ಸಿರಾ ಸುತ್ತಮುತ್ತ 10 ಕಿ.ಮೀ ಆದಮೇಲೆ ಒಂದು ಎಕರೆ ಭೂಮಿ ಬೆಲೆ ಎಂದರೆ 30,40 ಲಕ್ಷ ರೂ. ಇದೆ. ತುಮಕೂರಿನಿಂದ ದೂರ ಹೋದರೆ ಭೂಮಿಯ ಬೆಲೆ 50 ಲಕ್ಷ ರೂ.ಗಳಿಂದ 1 ಕೋ. ರೂ. ಆಗುತ್ತದೆ. ಈ Act ಅನ್ನು ಹೇಗೆ ದುರುಪಯೋಗ ಮಾಡಿಕೊಳ್ಳಬಹುದೆನ್ನುವುದಕ್ಕೆ ನಿಸ್ಸೀಮರಿದ್ದಾರೆ. ಭೂಗಳ್ಳರು ಎನ್ನುವವರು ನಾವು ಚಾಪೆ ಕೆಳಗೆ ತೂರಿದರೆ ಅವರು ರಂಗೋಲಿ ಕೆಳಗೆ ತೂರುತ್ತಾರೆ. ಈಗ ನೀವು ಏನೋ ಮಾಡಿ, ಅವರು 50 ಗುಡಿಸಲು ಹಾಕಿಸುತ್ತಾರೆ. ರಾತ್ರೋರಾತ್ರಿ ಗುಡಿಸಲು ಹಾಕಿ documents create ಮಾಡಿದ್ದಾದ ಮೇಲೆ ಇದರಲ್ಲಿ confirms ಮಾಡಿದ್ದಾದಮೇಲೆ 50 ಗುಡಿಸಲನ್ನು ಕಿತ್ತುಬಿಟ್ಟು ಸ್ವಂತ ಗೋಡೆ ಕಟ್ಟಿಕೊಂಡರೆ ಆಗ ನೀವೇನು ಮಾಡುತ್ತೀರಿ? ಭೂಗಳ್ಳರಿಗಿರುವಷ್ಟು ಬುದ್ಧಿ ಯಾರಿಗೂ ಇಲ್ಲ. ನಾವು ಏನೇ ಕಾನೂನು ಮಾಡಿದರೂ ಕೂಡ ಆ ಕಾನೂನು ಮುರಿಯುವುದು ಅವರಿಗೆ ಗೊತ್ತಿದೆ. ಹಾಗಾಗಿ, ಎಲ್ಲಿಯೂ ಕೂಡ ಅದಕ್ಕೆ ಅವಕಾಶವಾಗದ ಹಾಗೆ ಮಾಡಬೇಕು.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು) : ಸಕ್ರಮವಾಗಿದ್ದನ್ನು ಅವನು ಯಾರಿಗೂ ಪರಭಾರೆ ಮಾಡುವ ಹಾಗಿಲ್ಲ. Illegal ಆಗಿ ಗುಡಿಸಲು ಹಾಕಿಕೊಳ್ಳುವುದಕ್ಕೂ ಆಗುವುದಿಲ್ಲ. ಬರುವುದೂ ಇಲ್ಲ. ಅವನ ಹಕ್ಕುಪತ್ರದಲ್ಲಿ 15 years ban ಇರುತ್ತದೆ. ಪೇಜ್ 2ರಲ್ಲಿದೆ ಓದಿ ಸಾರ್.

ಶ್ರೀ ಟಿ.ಬಿ. ಜಯಚಂದ್ರ : ನಾನು ಇದನ್ನು ನೋಡಿದೆ. ಇದೆಲ್ಲಾ hypothetical ಆಗಿ ಇದೆ. ಏನು ಆಗಬಹುದು ಎಂದು ಹೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : Imagination ಮಾಡುವುದಲ್ಲ.

ಅಧ್ಯಕ್ಷರು : ಯಾರೋ ಒಬ್ಬರು ತಪ್ಪು ಮಾಡಿದರೆ ಎಲ್ಲರಿಗೂ ಶಿಕ್ಷೆಯಾಗಬೇಕು?

ಶ್ರೀ ಟಿ.ಬಿ. ಜಯಚಂದ್ರ : ಅದಕ್ಕೋಸ್ಕರ ಒಂದು ಕಾನೂನು ಮಾಡಿ.

ಅಧ್ಯಕ್ಷರು : ಯಾರೋ ಒಬ್ಬ ಭೂಕಬಳಿಕೆ ಮಾಡುತ್ತಾನೆಂದರೆ ಎಲ್ಲಾ ಬಡವರೂ ಇದರಿಂದ suffer ಆಗಬೇಕೆಂದು ಹೇಳುತ್ತಿದ್ದೀರಾ?

ಶ್ರೀ ಟಿ.ಬಿ. ಜಯಚಂದ್ರ : ಆಗಬಾರದು.

ಅಧ್ಯಕ್ಷರು : ನೀವು ಅದೇ ಹೇಳುತ್ತೀರಲ್ಲ? ನಿಮ್ಮ ಊರಿನಲ್ಲಿ ಗುಡಿಸಲು ಹಾಕಿದರೆ ಕಿತ್ತು ಹಾಕುವುದಕ್ಕೆ ಅಧಿಕಾರವಿಲ್ಲವೇ? ನಿಮಗೆ ಈ negative thinking ಏಕೆ? Negative thinking ಏಕೆ ಬೇಕು?

ಶ್ರೀ ಟಿ.ಬಿ. ಜಯಚಂದ್ರ : ಬೆಂಗಳೂರು ಸುತ್ತಮುತ್ತ 15 ಕಿ.ಮೀ. 20 ಕಿ.ಮೀ. ಸರ್ಕಾರಿ ಜಮೀನಿನಲ್ಲಿ apartment....

(ಗೊಂದಲ)

ಅಧ್ಯಕ್ಷರು : ಬೆಂಗಳೂರು ಸುತ್ತ ಮುತ್ತ ಭೂಕಬಳಿಕೆ ಮಾಡಿದವರಿಗೆ ಕ್ರಮ ತೆಗೆದುಕೊಳ್ಳುವುದಕ್ಕೆ that is 192(a) ಪ್ರಕಾರ ಅಧಿಕಾರ ಕೊಟ್ಟಿದೆಯಲ್ಲ? Amendment is there. ಅದನ್ನು ಮಾಡಿ.

(ಗೊಂದಲ)

ಅಧ್ಯಕ್ಷರು : ಯಾರೋ ಒಬ್ಬ ತಪ್ಪು ಮಾಡುತ್ತಾನೆಂದು ಇಲ್ಲಿ 8–10 ಜಿಲ್ಲೆಯವರು Suffer ಆಗಬೇಕೆ? ನಿಮ್ಮ ಈ ವಾದ ಸರಿ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : ಅಧಿಕಾರಿಗಳು ಯಾವ ರೀತಿಯಾಗಿ ಅವರಿಗೆ ಸಹಾಯ ಮಾಡುವುದಕ್ಕೆ ಇದ್ದಾರೆ? ಅವರು ಖಂಡಿತ ಮಾಡುವುದಿಲ್ಲ.

ಶ್ರೀ ಎಸ್. ಶಿವಣ್ಣ (ಜೀವಿಶಾಸ್ತ್ರ ಮತ್ತು ಪರಿಸರ ಖಾತೆ ಸಚಿವರು) : ಅವರನ್ನು ಕಿತ್ತು ಹಾಕಿ.

ಅಧ್ಯಕ್ಷರು : There is already a provision.

ಶ್ರೀ ಎಸ್. ಶಿವಣ್ಣ : ಸಿದ್ದರಾಮಯ್ಯನವರೆ, ಎಲ್ಲಿಯೂ apartment ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ : 7 (ಸಿ)ಯಲ್ಲಿ coming is the way of existing land proposed roads ಎಂದು ಇದೆಯಲ್ಲ ಅಲ್ಲಿ at least minimum 15 ಅಡಿ ಇರುವ ರೋಡ್ ಎಂದು ಹಾಕಿ.

ಅಧ್ಯಕ್ಷರು : There is a provision. ನಾವೇ 192(a) amend ಮಾಡಿದ್ದೇವೆ. ಯಾರು ಈ ತರಹ ಅಕ್ರಮ ಮಾಡುತ್ತಾರೆ, ಅವರ ಮೇಲೆ criminal ಮೊಕದ್ದಮೆ ಹಾಕಬಹುದು, ಕೇಸ್ ಮಾಡಬಹುದು ಎಂದು ಇದೆ. ಅದನ್ನು ಸಂಬಂಧಪಟ್ಟ ಅಧಿಕಾರಿಗಳು use ಮಾಡಲಿ. ನೀವು ಅದನ್ನು ಜಾಗೃತಿ ವಹಿಸಿ. ಅದು ಬಿಟ್ಟು, ಈ ಬಡವರಿಗೆಂದು ಕೊಡುವುದಕ್ಕೆ ಇಲ್ಲಿ ಏನೋ guess ಮಾಡಿಕೊಂಡು ಹೇಳುತ್ತೀರಲ್ಲ? This is not fair.

ಶ್ರೀ ಟಿ.ಬಿ. ಜಯಚಂದ್ರ : Speaker ರವರೆ, ತಾವು ಹೇಳಿದ್ದನ್ನು ನಾನು ಪಾಲಿಸುತ್ತೇನೆ. ತಮ್ಮ ಭಾವನೆಯನ್ನು ನಾನು ಅರ್ಥ ಮಾಡಿಕೊಳ್ಳುತ್ತೇನೆ. ಬೆಳಗ್ಗೆ CAG report ಮಂಡಿಸಿದ್ದಾರೆ.

ಅಧ್ಯಕ್ಷರು : ಅದು ಬೆಂಗಳೂರಿನಲ್ಲಿ. ಹಳ್ಳಿಗಳಲ್ಲಿ ಅದು ಆಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನಾನು ಹೇಳುತ್ತಿದ್ದೇನೆ. ಅದನ್ನು ನೀವು ತರಿಸಿ ನೋಡಿ.

ಅಧ್ಯಕ್ಷರು : ನೋಡಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ : ಎಷ್ಟು Government land ಲೂಟಿಯಾಗಿದೆ ಎನ್ನುವುದು ಗೊತ್ತಾಗುತ್ತದೆ.

ಅಧ್ಯಕ್ಷರು : ಅದು Bangalore city. ಸಿಟಿಯವರು ಮಾಡುವುದನ್ನು ನೀವೇಕೆ ಹಳ್ಳಿಯವರಿಗೆ ಹೇಳುತ್ತೀರಿ?

ಶ್ರೀ ಟಿ.ಬಿ. ಜಯಚಂದ್ರ : ಹೇಳುವುದು ಸುಲಭ.

ಶ್ರೀ ಎಸ್. ಶಿವಣ್ಣ : ತುಮಕೂರಿನಲ್ಲಿ ಹುಟ್ಟಿ ಬೆಳೆದವರನ್ನು ನೋಡಿದ್ದಾರೆ. ಎಲ್ಲಿ ಆ ತರಹ misuse ಆಗಿದೆ ಎಂದು ತಾವು ಹೇಳಿಬಿಡಿ. ಈಗ ನಾವೇನು Bill ತಂದಿದ್ದೇವೆ, ಅದಕ್ಕೆ ನಾವು ನಿಮಗೆ ಬೆಲೆ ಕೊಡುತ್ತೇವೆ. Unnecessary ಬಡವರು ಕಟ್ಟಿಕೊಳ್ಳುವುದಕ್ಕೆ ಏಕೆ ಈ ರೀತಿ ಹೇಳುತ್ತೀರಿ? ನಿಮ್ಮ ಕ್ಷೇತ್ರ ಬೆಂಗಾಡಾಗಿದೆ. ಸುಮ್ಮನೆ ಏಕೆ ಹೇಳುತ್ತೀರಿ? ಮಾತನಾಡ ಬೇಕೆಂದು ಮಾತನಾಡುತ್ತಿದ್ದೀರಿ.

ಶ್ರೀ ಟಿ.ಬಿ. ಜಯಚಂದ್ರ : ಯಾವುದೇ ಕಾರಣದಿಂದ ಕೂಡ ಮೋಸ ಮಾಡಬಾರದು. ಆ ಕಾರಣಕ್ಕೋಸ್ಕರ ಎಲ್ಲ ನಿರ್ಬಂಧಗಳನ್ನು ಹಾಕಿ ಎನ್ನುವುದೇ ನಮ್ಮ ಒತ್ತಾಯ.

ಶ್ರೀ ಸಿದ್ದರಾಮಯ್ಯ : ಇದಕ್ಕೆ end ಇರುವುದಿಲ್ಲ. ಇನ್ನುಮೇಲೆ ಈ ತರಹ unauthorized ಆಗಿ occupy ಮಾಡಿಕೊಳ್ಳುವವರಿಗೆ, encroach ಮಾಡುವವರಿಗೆ, ಅದಾದರೆ, Revenue Officers ಜವಾಬ್ದಾರರೆಂದು ಸೇರಿಸಿ. ಅವರಿಂದಲೇ ಇವೆಲ್ಲಾ ಆಗುವುದು. ನಾವು ಆಶ್ರಯ ಮನೆಗಳನ್ನು ಕೊಡುತ್ತೇವೆ. ಬೇರೆ scheme ಗಳಲ್ಲಿ ಮನೆ ಕೊಡುತ್ತೇವೆ. ಇಂದಿರಾ ಆವಾಸ್ ಮನೆ ಕೊಡುತ್ತೇವೆ, ಅವಬೇಡ್ಕರ್ ಮನೆಗಳನ್ನು ಕೊಡುತ್ತೇವೆ. ಬಡವರಿಗೆ ಈ ಸ್ಕೀಂಗಳಲ್ಲಿ ಮನೆಗಳನ್ನು ಕೊಡುತ್ತೇವೆ. ಇದಾದಮೇಲೂ ಕೂಡ Government land ಗಳನ್ನು ಅವರು ಅತಿಕ್ರಮಣ ಮಾಡುವುದು, ಮತ್ತೆ ಇದನ್ನು ನಾವು ಮಾಡುತ್ತಲೇ ಹೋಗುತ್ತವಂಥದ್ದು where is the end to this?

ಅಧ್ಯಕ್ಷರು : 192(a) ಅದನ್ನು strict ಆಗಿ follow ಮಾಡುವುದಕ್ಕೆ ಹೇಳಬೇಕು.

ಶ್ರೀ ಸಿದ್ದರಾಮಯ್ಯ : ಅದಕ್ಕೋಸ್ಕರ ಇದನ್ನು ಮಾಡುವಾಗ one-time measure ಎಂದು ಮಾಡಿ. ಅವರಿಗೆ ಇನ್ನು ಮೇಲೆ ಮಾಡಬಾರದೆಂದು ಜವಾಬ್ದಾರಿ ಹಾಕಿ.

ಶ್ರೀ ಕೆ.ಎಸ್. ಈಶ್ವರಪ್ಪ : ವಿಶೇಷವಾಗಿ ಇವತ್ತು ಈ ವಿಧೇಯಕವನ್ನು ಏನು ಮಂಡನೆ ಮಾಡಿದ್ದೇನೆ, ಅದಕ್ಕೆ ಇಡೀ ವಿಧಾನಸಭೆಯ ಎಲ್ಲ ಸದಸ್ಯರೂ ಕೂಡ ಸ್ವಾಗತವನ್ನು ಮಾಡಿದ್ದಾರೆ. ಉಳಿದಂಥ ಅಂಶಗಳನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇದು ನಗರ ಪ್ರದೇಶದ ಬಾರ್ಡರ್‌ನಲ್ಲಿ ಬರುವಂಥ ಜಮೀನುಗಳಿಗೂ ಸಮಸ್ಯೆಯಾಗುತ್ತದೆಂದು ಹೇಳಿದ್ದೀರಿ. ನಗರ ಪ್ರದೇಶದಲ್ಲಿ ಸರ್ಕಾರಿ ಜಮೀನಿನಲ್ಲಿ ವಾಸ ಮಾಡುತ್ತಿರುವ ಬಡವರಿಗೂ ಕೂಡ ಸಕ್ರಮ ಮಾಡುವುದಕ್ಕೆ ಒಂದು ಬಿಲ್ ಅನ್ನು ನಾನು ಮಂಡನೆ ಮಾಡುವವನಿದ್ದೇನೆ. ಅದರ ಮುಖಾಂತರವೂ ಕೂಡ ತುಂಬಾ ಸ್ಪಷ್ಟವಾಗಿ ಆ ಬಡವರಿಗೂ ಕೂಡ ಅನುಕೂಲವಾಗುತ್ತದೆ. ಈ ಒಂದು ವಿಧೇಯಕವನ್ನು ಅನುಮೋದನೆ ಮಾಡಿಕೊಡಬೇಕೆಂದು ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ : Revenue ಅಧಿಕಾರಿಗಳ ಮೇಲಿನ ಜವಾಬ್ದಾರಿ ಬಗ್ಗೆ ಹೇಳಿ.

ಅಧ್ಯಕ್ಷರು : Already ಇದೆ. ಅದನ್ನು implement ಮಾಡಿದರೆ ಆಯಿತು.

(ಗೊಂದಲ)

ಶ್ರೀ ಹೆಚ್. ಗೋಪಾಲ ಭಂಡಾರಿ : ಒಂದು ಸಣ್ಣ submission. Boundary ಯಿಂದ 3 ಕಿ.ಮೀ. ಎನ್ನುವುದನ್ನು withdraw ಮಾಡಿಸಬೇಕು. ಗ್ರಾಮ ಪಂಚಾಯಿತಿಯ ಹೊರವರ್ತುಲಗಳಿಂದ 3 ಕಿ.ಮೀ. ದೂರ ಎನ್ನುವುದನ್ನು ಗಮನಿಸಬೇಕು.

ಶ್ರೀ ಕೆ.ಎಸ್. ಈಶ್ವರಪ್ಪ : ಇದು ಗ್ರಾಮೀಣ ಪ್ರದೇಶದ ಸರ್ಕಾರಿ ಭೂಮಿಯಲ್ಲಿ ವಾಸ ಮಾಡುತ್ತಿರುವ ಬಡವರಿಗೆ ಯಾವ ರೀತಿ ಹಕ್ಕುಪತ್ರ ಕೊಡಬೇಕೆಂದು ಯೋಚನೆ ಮಾಡಿದ್ದೀರೋ ನಗರ ಪ್ರದೇಶಕ್ಕೂ ಕೊಡಬೇಕು, ಇದರಲ್ಲೇ ಸೇರಿಸಬೇಕು ಎಂದು ಬಹಳ ಜನ ಒತ್ತಾಯ ಮಾಡಿದ್ದೀರಿ. ಹಾಗಾಗಿ ಇದೇ ಬಿಲ್‌ನಲ್ಲಿ ಸೇರಿಸಲಿಕ್ಕೆ ಆಗಲಿಕ್ಕಿಲ್ಲ. ಅದಕ್ಕೋಸ್ಕರ ಇನ್ನೊಂದು ಬಿಲ್ ತರಬೇಕೆಂದು ರೆಡಿ ಮಾಡಿದೆ. ಈಗ ಅದನ್ನೂ ಕೂಡ ಮಂಡನೆ ಮಾಡುತ್ತೇನೆ. ಆಗ ಈ ಸಮಸ್ಯೆ ಉದ್ಭವವಾಗುವುದಿಲ್ಲ. ಹೇಗೆ ಎನ್ನವುದನ್ನು ನಾನು ಹೇಳುತ್ತೇನೆ.

ಶ್ರೀ ಕೆ. ರಘುಪತಿ ಭಟ್ : ನಗರದ್ದು solve ಆಗುತ್ತದೆ. ಗ್ರಾಮಪಂಚಾಯಿತಿದ್ದು solve ಆಗುವುದಿಲ್ಲ. ಆ ಕಾಯ್ದೆಯಿಂದ ನಗರದ್ದು ಸರಿಯಾಗಬಹುದು. ಆದರೆ, ಗ್ರಾಮ ಪಂಚಾಯಿತಿಯಿಂದ 3 ಕಿ.ಮೀ.ಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು : Rules ಮಾಡುವಾಗ ಮಾಡಿ.

ಶ್ರೀ ರಮಾನಾಥ ರೈ ಬಿ. : ಬಿಲ್ ಬಂದು ಏನು ಪ್ರಯೋಜನ? ಆ 3 ಕಿ.ಮೀ. ಎಂದು ಇದ್ದರೆ ಈ ಬಿಲ್ ಏನು ಉಪಯೋಗ? ಒಂದು ಪಂಚಾಯಿತಿಯಿಂದ ಇನ್ನೊಂದು ಪಂಚಾಯಿತಿ....

ಶ್ರೀ ಕೆ. ರಘುಪತಿ ಭಟ್ : ಆ ಇನ್ನೊಂದು ಕಾಯ್ದೆ ತರುವುದರಿಂದ ನಗರದ್ದು ಸಾಲ್ವ್ ಆಗಬಹುದು. ಗ್ರಾಮ ಪಂಚಾಯಿತಿಯ 3 ಕಿ.ಮೀ. ಗೆ ಸಮಸ್ಯೆಯಾಗುತ್ತದೆ.

ಅಧ್ಯಕ್ಷರು : ಮಾಡುತ್ತೇವೆಂದು ಹೇಳಿದ್ದಾರಲ್ಲ.?

ಶ್ರೀ ಕೆ. ರಘುಪತಿ ಭಟ್ : ಗ್ರಾಮ ಪಂಚಾಯಿತಿಯಿಂದ 3 ಕಿ.ಮೀ. ಎನ್ನುವುದನ್ನು ತೆಗೆಯಬೇಕು.

(ಗೊಂದಲ)

ಶ್ರೀ ಹೆಚ್. ಗೋಪಾಲ ಭಂಡಾರಿ : ನಗರಕ್ಕೆ ಬೇರೆ ಬರಲಿ. ಹೊರವರ್ತುಲದಿಂದ 3 ಕಿ.ಮೀ. ಎಂದು ತೆಗೆದುಕೊಂಡರೆ ಎಲ್ಲಿ ಕೊಡುತ್ತೀರಿ? ಎಲ್ಲೂ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಗ್ರಾಮ

ಪಂಚಾಯಿತಿಯ ಹೊರ ವರ್ತುಲದಿಂದ ಮೂರು ಕಿ.ಮೀ. ಕೊಡಲಿಕ್ಕೆ ಆಗುವುದಿಲ್ಲವೆಂದರೆ ಮತ್ತೆ ಎಲ್ಲಿ ಕೊಡುವುದು? ಕೊಡಲಿಕ್ಕೆ ಜಾಗವಿಲ್ಲ. ನಗರಕ್ಕೆ ಬೇರೆ ತರುತ್ತೀರಿ ಅದು ಬೇರೆ ವಿಚಾರ. ಆಗ ನಗರದ ಸಮಸ್ಯೆ ಪರಿಹಾರವಾಗುತ್ತದೆ. ಇಲ್ಲಿ ಸಮಸ್ಯೆ ಹಾಗೆಯೆ ಜೀವಂತವಾಗಿ ಉಳಿದುಬಿಡುತ್ತದೆ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : Truck terminal ಕಂಪನಿಗೆ ಕೊಟ್ಟಿರುವಂಥ ಜಾಗ ಹುಬ್ಬಳ್ಳಿ ತಾಲ್ಲೂಕಿನ ದೊಡ್ಡ ಗ್ರಾಮದಲ್ಲಿ ಕೊಟ್ಟಿದ್ದಾರೆ. ಈ ಗ್ರಾಮದಲ್ಲಿ ಸ್ಮಶಾನಕ್ಕೆ ಎರಡು ಎಕರೆ ಕೇಳಿದರೆ. ಆಶ್ರಯ ಮನೆಗೆಂದು ಕೇಳಿದರೆ ಎರಡು ಎಕರೆ ಜಮೀನು ಕೊಡಲಿಲ್ಲ.

ಅಧ್ಯಕ್ಷರು : ಅದು ಬೇರೆ issue.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ಮನೆ ಕಟ್ಟಿದಂಥವರನ್ನು ಮನೆ ತೆರವು ಮಾಡಿಸಿದ್ದಾರೆ. Truck terminal ಕೆಲಸ ಮಾಡುತ್ತಿದೆ. ಗ್ರಾಮದಿಂದ 4 ಕಿ.ಮೀ. ದೂರ ಇದೆ. ಹೀಗಾಗಿ ಮಾನ್ಯ ಕಂದಾಯ ಸಚಿವರು ಸಂಬಂಧಪಟ್ಟಂತೆ ಮಾಹಿತಿ ತರಿಸಿಕೊಂಡು ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಪರ್ಯಾಲೋಚನಾ ಪ್ರಸ್ತಾವವನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ.

ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ (ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದಿರುಗಿಸಲ್ಪಟ್ಟಂತೆ) 2012 ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆ ಪರ್ಯಾಲೋಚಿಸುತ್ತದೆ ಎಂಬ ವಿಷಯ ಸಭೆಯ ಮುಂದೆ ಇದೆ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು

ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಅನುಮೋದನೆ ದೊರಕಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಅಧ್ಯಕ್ಷರು : ಈಗ ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕುತ್ತೇನೆ

ಖಂಡ 2 ರಿಂದ 3 ರವರೆಗೆ

ಅಧ್ಯಕ್ಷರು : 2 ರಿಂದ 3 ರವರೆಗಿನ ಖಂಡಗಳು ವಿಧೇಯಕದ ಅಂಗವಾಗಿರಬೇಕು ಎನ್ನವುದು ಸಭೆಯ ಮುಂದಿರುವ ವಿಷಯ

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವಕ್ಕೆ ಒಪ್ಪಿಗೆ ದೊರಕಿದೆ

2 ರಿಂದ 3 ರವರೆಗಿನ ಖಂಡಗಳು ವಿಧೇಯಕದ ಅಂಗವಾದವು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(2 ರಿಂದ 3 ರವರೆಗಿನ ಖಂಡಗಳನ್ನು ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಮೊದಲನೆ ಖಂಡ, ಹೆಸರು ಮತ್ತು ಅವತರಣಿಕೆ

ಅಧ್ಯಕ್ಷರು : ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆ ವಿಧೇಯಕದ ಭಾಗವಾಗಬೇಕೆಂಬುದು ಸಭೆಯ ಮುಂದಿರುವ ವಿಷಯ.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು
ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು
ಭಾವಿಸುತ್ತೇನೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ
ಪ್ರಸ್ತಾವವು ಅಂಗೀಕರಿಸಲ್ಪಟ್ಟಿದೆ.

ಪ್ರಥಮ ಖಂಡ, ಹೆಸರು ಮತ್ತು ಅವರತಣಿಕೆ ವಿಧೇಯಕದ ಅಂಗವಾಗಿದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವರತಣಿಕೆಗಳನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಅಧ್ಯಕ್ಷರು : ಮಾನ್ಯ ಮುಖ್ಯಮಂತ್ರಿಗಳು ಅಂಗೀಕಾರ ಪ್ರಸ್ತಾವ ಮಂಡಿಸಿ.

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಎಸ್. ಈಶ್ವರಪ್ಪ ಉಪಮುಖ್ಯಮಂತ್ರಿಗಳು(ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ (ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದಿರುಗಿಸಲ್ಪಟ್ಟಂತೆ) 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಸಭೆ ಅಂಗೀಕರಿಸಬೇಕೆಂದು ಸೂಚಿಸುತ್ತೇನೆ.

ಅಧ್ಯಕ್ಷರು : ಪ್ರಸ್ತಾವವನ್ನು ಮಂಡಿಸಲಾಗಿದೆ.

ಅದನ್ನು ಈಗ ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ,

ಕರ್ನಾಟಕ ವಿಧಾನ ಪರಿಷತ್ತಿನಿಂದ ತಿದ್ದುಪಡಿಗಳೊಂದಿಗೆ ಅಂಗೀಕಾರವಾದ ರೂಪದಲ್ಲಿ (ಉಭಯ ಸದನಗಳಿಂದ ಅಂಗೀಕಾರವಾದಂತೆ ಹಾಗೂ ರಾಜ್ಯಪಾಲರಿಂದ ಪುನರ್ ಪರಿಗಣನೆಗೆ ಹಿಂದಿರುಗಿಸಲ್ಪಟ್ಟಂತೆ) 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯ ಅಂಗೀಕರಿಸಬೇಕು.

ಪ್ರಸ್ತಾವದ ಪರವಾಗಿರುವವರು "ಹೌದು" ಎಂದು ಸೂಚಿಸಬೇಕು

ಪ್ರಸ್ತಾವದ ವಿರೋಧವಾಗಿರುವವರು "ಇಲ್ಲ" ಎಂದು ಸೂಚಿಸಬೇಕು

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ ಎಂದು ಭಾವಿಸುತ್ತೇನೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವವು "ಹೌದು" ಎನ್ನುವವರ ಪರವಾಗಿದೆ

ಪ್ರಸ್ತಾವ ಅಂಗೀಕರಿಸಲ್ಪಟ್ಟಿದೆ ಮತ್ತು ವಿಧೇಯಕಕ್ಕೆ ಅನುಮೋದನೆ ದೊರಕಿದೆ.

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ನೀಡಲಾಯಿತು)

2. ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ 2012.

ಅಧ್ಯಕ್ಷರು : ಈಗ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕ, 2012.

ಶ್ರೀ ಕೆ.ಎಸ್. ಈಶ್ವರಪ್ಪ (ಉಪಮುಖ್ಯಮಂತ್ರಿಗಳು, ಕಂದಾಯ ಹಾಗೂ ಗ್ರಾಮೀಣಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೆ, 2012ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು (ಪರ್ಯಾಲೋಚಿಸಬೇಕೆಂದು ಸೂಚಿಸುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ನಿನ್ನೆ present ಆಗಿದೆ. Explain ಮಾಡಿ.